## ಅಧ್ಯಾಯ-೧೨

# ಪ್ರೇಕ್ಷಣೀಯ ಸ್ಥಳಗಳು

ಈ ತಾಲೂಕು ಸಾಂಸ್ಕೃತಿಕ ಹಾಗೂ ಐತಿಹಾಸಿಕ ದೃಷ್ಟಿಯಿಂದ ಸಮೃದ್ಧವಾಗಿದೆ. ಸಾಂಸ್ಕೃತಿಕ ರಾಜಧಾನಿಯಾದ ಮೈಸೂರು ಶ್ರೀಗಂಧದ ನಾಡಾಗಿ ಶಿಲ್ಪಕಲಾ ಬೀಡಾಗಿ, ದಸರಾದಿಂದಾಗಿ ವಿಶ್ವವಿಖ್ಯಾತ ಪ್ರವಾಸಿ ತಾಣವಾಗಿ, ಲಲಿತಕಲೆಗಳ ತವರೂರಾಗಿ, ನಿವೃತ್ತರ ಸ್ವರ್ಗವಾಗಿ ಸುಪ್ರಸಿದ್ಧವಾಗಿದೆ. ರಾಜ್ಯದಲ್ಲಿ ವಿದ್ಯುತ್ ಸೌಲಭ್ಯ ಪಡೆದ ಎರಡನೇ ಊರು ಎಂಬ ಹೆಗ್ಗಳಿಕೆಯನ್ನು ಹೊಂದಿರುವ ಮೈಸೂರು ನಗರ (೧೯೦೮) ಭವ್ಯ ಅರಮನೆ ಹಾಗೂ ಆಕರ್ಷಕ ಉದ್ಯಾನಗಳಿಂದ ಶೋಭಿಸುತ್ತಿದ್ದು, ಆಗ್ನೆಯದಲ್ಲಿರುವ ಚಾಮುಂಡಿ ಬೆಟ್ಟವು ನಗರಕ್ಕೆ ವಿಶೇಷ ಮೆರುಗನ್ನು ನೀಡಿದ್ದು, ಪ್ರವಾಸಿಗರ ಕಣ್ಮನಗಳನ್ನು ಸೆಳೆಯುತ್ತಿದೆ.

ತಾಲೂಕಿನ ಚರಿತ್ರೆಯನ್ನು ಸಾರುವ ಪ್ರಾಚೀನ ಶಾಸನ ಹಾಗೂ ಸಾಹಿತ್ಯ ಗ್ರಂಥಗಳಲ್ಲಿ ಪ್ರಾಚೀನ ಆಡಳಿತ ಘಟಕಗಳನ್ನು ಹೆಸರಿಸಲಾಗಿದೆ. ಇತಿಹಾಸಾರಂಭ ಕಾಲದಲ್ಲೇ ಮೈಸೂರು ಪ್ರದೇಶಕ್ಕೆ ಸಂಬಂಧಿಸಿದಂತೆ ಮಹಿಷಮಂಡಲ, ಎರುಮೈನಾಡು, ಮುಂತಾದ ಪ್ರಸ್ತಾಪವಿದ್ದರೂ ಈ ಪ್ರದೇಶ ತಲಕಾಡಿನ ಗಂಗರ ಗಂಗವಾಡಿ-೯೬೦೦೦ ದ ವ್ಯಾಪ್ತಿಗೆ ಒಳಪಟ್ಟಿದ್ದು, ನಂತರದಲ್ಲಿ ಚಾಲುಕ್ಯ ಸಾಮಂತರ ಅಧೀನಕ್ಕೊಳಪಟ್ಟಿದ್ದಾಗ ತಾಲೂಕಿನ ವರುಣ ಅವರ ಪ್ರಮುಖ ನೆಲೆಯಾಗಿದ್ದು ಮಹಿಷೂರು, ಮಹಿಷಾಸುರಪುರ, ಮೈಸುನಾಡು-೭೦ ಮುಂತಾದ ಉಲ್ಲೇಖ ಶಾಸನಗಳಲ್ಲಿದೆ. ಚೋಳರು, ಹೊಯ್ಸಳರು, ವಿಜಯನಗರದರಸರು ಹಾಗೂ ವಿವಿಧ ಪಾಳೇಗಾರರ ಅಧೀನದಲ್ಲಿ, ಅದರಲ್ಲೂ ವಿಶೇಷವಾಗಿ ಮೈಸೂರು ಒಡೆಯರ ಕಾಲದಲ್ಲಿ ಆಡಳಿತ ಕೇಂದ್ರವಾಗಿ ಮೈಸೂರು ವಿಶ್ವವಿಖ್ಯಾತವಾಯಿತು. ತಾಲೂಕು ಕೇಂದ್ರ ಮೈಸೂರು ಸೇರಿದಂತೆ ತಾಲೂಕಿನ ವರಕೋಡು, ವರುಣ, ವಾಜಮಂಗಲ, ಕಳಸ್ತವಾಡಿ, ಆನಂದೂರು, ಬೆಲವತ್ತ, ಜಯಪುರ, ದೂರ, ಕಲ್ಲಹಳ್ಳಿ, ಸೋಮೇಶ್ವರಪುರ, ಉತ್ತನಹಳ್ಳಿ, ಚಾಮುಂಡಿಬೆಟ್ಟ, ಕುಮಾರಬೀಡು, ಬೆಳವಾಡಿ, ದೇವಲಾಪುರ, ಬೂಗತಗಳ್ಳಿ, ಹೆಮ್ಮನಹಳ್ಳಿ ಮುಂತಾದ ೧೪೦ಕ್ಕೂ ಹೆಚ್ಚುಗ್ರಾಮಗಳಲ್ಲಿ ಸಿ ವರ್ಗದ ೩೮೭ ದೇವಾಲಯ ಹಾಗೂ ಇತರ ಧಾರ್ಮಿಕ ಸಂಸ್ಥೆಗಳನ್ನು ಮುಜರಾಯಿ ಇಲಾಖೆಯು ಗುರುತಿಸಿ ಆರ್ಥಿಕ ನೆರವು ನೀಡುತ್ತಿದೆ.

ಅಲ್ಲದೆ, ಚಾಮುಂಡೇಶ್ವರಿ ದೇವಾಲಯ (ಎ ವರ್ಗ) ಹಾಗೂ ಸಂತೇಪೇಟೆಯ ಪ್ರಸನ್ನ ನಂಜುಂಡೇಶ್ವರ ದೇವಾಲಯ (ಬಿ ವರ್ಗ)ಗಳಿಲ್ಲಿವೆ. ಹೀಗೆ ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟ ಪರಂಪರೆಯನ್ನು ಹೊಂದಿರುವ ಈ ತಾಲೂಕಿನ ಸಾಂಸ್ಕೃತಿಕ ಮಹತ್ವದ ಆಯ್ದ ಸ್ಥಳಗಳನ್ನಿಲ್ಲಿ ಪರಿಚಯಿಸಲಾಗಿದ್ದು, ಕೆಲವನ್ನು ಸಮೀಪದ ಸ್ಥಳಗಳಿಗೆ ಸೇರಿಸಿ ಪರಿಚಯಿಸಲಾಗಿದೆ. ಆಯಾ ಸ್ಥಳದೊಂದಿಗೆ ಕಂಸದಲ್ಲಿ ನೀಡಿರುವ ಸಂಖ್ಯೆಯು ೨೦೦೧ರ ಜನಗಣತಿಯಂತೆ ಆಯಾ ಸ್ಥಳದ ಜನಸಂಖ್ಯೆಯನ್ನು ಸೂಚಿಸುತ್ತದೆ.

**ಮೈಸೂರು (೧,೬೫,೮೧೫) :** ನಾಡಿನ ಪ್ರಮುಖ ಪ್ರವಾಸಿ ಕೇಂದ್ರವಾದ ಮೈಸೂರು ತಾಲೂಕು ಹಾಗೂ ಜಿಲ್ಲಾ ಕೇಂದ್ರವೂ ಆಗಿದ್ದು, ಅಲ್ಲಿ ನಡೆಯುವ ದಸರೆ ಉತ್ಸವದಿಂದಾಗಿ ವಿಶ್ವವಿಖ್ಯಾತವಾಗಿದೆ. ಅಲ್ಲದೆ ವರ್ಷದುದ್ದಕ್ಕೂ ಪ್ರವಾಸಿಗರನ್ನು ಸೆಳೆಯುವ ಆಕರ್ಷಕ ಸ್ಮಾರಕ, ವಸ್ತುಸಂಗ್ರಹಾಲಯಗಳಿಂದಾಗಿ ಪ್ರಸಿದ್ಧವಾಗಿದೆ.

**ಮೈಸೂರು ಅರಮನೆ :** ಮೈಸೂರು ನಗರದ ವಿಶೇಷ ಆಕರ್ಷಣೆಯಾಗಿರುವ ಈ ಅರಮನೆಯನ್ನು ಹಳೆಯ ಅರಮನೆಯು ಬೆಂಕಿ ಆಕಸ್ಮಿಕಕ್ಕೆ (೧೮೯೭) ಒಳಗಾದ ನಂತರ ಮಹಾರಾಣಿ ವಾಣೀವಿಲಾಸ ಅವರು ರೀಜೆಂಟರೊಂದಿಗೆ ಸಮಲೋಚಿಸಿ ಅದೇ ಅರಮನೆಯ ಅಡಿಪಾಯದ ಮೇಲೆ ನೂತನ ಅರಮನೆಯನ್ನು ನಿರ್ಮಿಸುವುದಕ್ಕೆ ಯೋಜಿಸಿದರು. ಭವ್ಯ ಕಟ್ಟಡದ ನಕಾಶೆಯನ್ನು ಸಿಮ್ಲಾದ ವೈಸ್ ರೀಗಲ್ ಲಾಡ್ಜ್‌ನ ಶಿಲ್ಪಿ ಹೆನ್ರಿ ಇರ್ವಿನ್ ತಯಾರಿಸಿದ. ಅದರಂತೆ ಮಹಾರಾಣಿ ವಾಣೀವಿಲಾಸ ಸನ್ನಿಧಿ ಅವರು ಅಕ್ಟೋಬರ್ ೧೮೯೭ರಲ್ಲಿ ಅಡಿಗಲ್ಲು ಹಾಕಿದರು. ಅರಮನೆ ನಿರ್ಮಾಣದ ಹೊಣೆ ಹೊತ್ತವರು ಅರಮನೆಯ ಅಭಿಯಂತರರಾಗಿದ್ದ ಬಿ.ಪಿ.ರಾಘುವಲು ನಾಯ್ಡು. ಅರಮನೆ ಕೆಲಸ ಪೂರ್ಣಗೊಂಡದ್ದು ೧೯೧೨ರಲ್ಲಿ, ಆಗ ತಗುಲಿದ ವೆಚ್ಚ ೪೧,೪೭,೯೧೩ ರೂಪಾಯಿಗಳು. ಅರಮನೆಯು ಒಟ್ಟು ೭೨ ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಮೈಚಾಚಿದೆ. ನಿರ್ಮಾಣ ಕಾರ್ಯದಲ್ಲಿ ಆದಷ್ಟೂ ಸ್ಥಳೀಯ ವಸ್ತುಗಳನ್ನೆ ಬಳಸಿರುವುದಲ್ಲದೆ ಪುನಃ ಬೆಂಕಿ ಅಪಘಾತಕ್ಕೆ ತುತ್ತಾಗದಂತೆ ಆಗ್ನಿನಿರೋಧಕ ವಿಧಾನವನ್ನೂ ಅಳವಡಿಸಲಾಗಿದೆ.

ಆರು ಸುಂದರ ಗೋಳ(ಗುಮ್ಮಟ)ಗಳನ್ನೊಳಗೊಂಡಿರುವ ಆ ಮನಮೋಹಕ ಕಟ್ಟಡವನ್ನು ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಅರಮನೆಯ ಹೊರಭಾಗವು ಮೊಗಲ್ ಶೈಲಿಯಲ್ಲಿದ್ದು ಒಳಭಾಗವು ಹಳೇಬೀಡು, ಬೇಲೂರುಗಳಲ್ಲಿರುವಂತಹ ಸುಂದರ ಸೂಕ್ಷ್ಮ ಕೆತ್ತನೆಯ ಕಂಬಗಳಿಂದ ಕೂಡಿದ್ದು, ಹೊಯ್ಸಳ ಹಾಗೂ ಮೋಘಲಾಯಿ ಶಿಲ್ಪಶೈಲಿಗಳನ್ನು ಮೇಳೈಸಿದೆ. ದೇಶ ವಿದೇಶಗಳಿಂದ ತರಿಸಿದ ಆಭ್ರಕ, ಅಗ್ನಿಶಿಲೆ ಹಾಗೂ ಅಮೃತ ಶಿಲೆಗಳನ್ನು ನಿರ್ಮಾಣದಲ್ಲಿ ಬಳಸಲಾಗಿದೆ. ಕಟ್ಟಡವನ್ನು ಬಲುಗಟ್ಟಿಯಾದ ಬೂದುಬಣ್ಣದ ಬೆಣಚು ಕಲ್ಲಿನಿಂದ ನಿರ್ಮಿಸಲಾಗಿದೆ. ಕಟ್ಟಡದೊಳಗಿರುವ ಮರದ ಕೆತ್ತನೆ, ದಂತದ ಕೆಲಸ, ಗಾರೆ, ಬಣ್ಣಗಳ ಸಮ್ಮೇಳಗಳು ಒಂದನ್ನೊಂದು ಮೀರಿಸುವಂತೆ ಚಿತ್ತಾಕರ್ಷಕವಾಗಿವೆ. ಅರಮನೆಯ ಒಳಗಿರುವ ತೊಟ್ಟಿ

ಮನೆ, ಕಲ್ಯಾಣ ಮಂಟಪ ಹಾಗೂ ಅಂಬಾವಿಲಾಸ ಎಲ್ಲವನ್ನೂ ಬಲು ಸೂಕ್ಷ್ಮವಾಗಿ ಗಾಜು, ಮರ ಮತ್ತು ಚೀನಾದ ಮಣ್ಣಿನಿಂದ ಅಲಂಕರಿಸಲಾಗಿದೆ.

ಅರಮನೆ ಕಟ್ಟಡದ ವಿಸ್ತೀರ್ಣ ೨೪೫ ಅಡಿ ಉದ್ದ ಹಾಗೂ ೧೫೬ ಅಡಿ ಅಗಲ. ಒಟ್ಟು ಮೂರು ಅಂತಸ್ತುಗಳಿದ್ದು, ನಡುಮಧ್ಯದಲ್ಲಿ ಐದು ಅಂತಸ್ತುಗಳ ಗೋಪುರವಿದೆ. ದೊಡ್ಡ ಗೋಪುರ ನೆಲದಿಂದ ೧೪೫ ಅಡಿ ಎತ್ತರವಿದ್ದು. ಅರಮನೆಯನ್ನೇ ಶಿಖರಪ್ರಾಯವಾಗಿರಿಸಿದ ಕೃತಿ ಇದಾಗಿದೆ. ಅರಮನೆಯ ನಿರ್ಮಾಣ ಕಾರ್ಯದಲ್ಲಿ ಸಕ್ರಿಯವಾಗಿ ಅಹರ್ನಿಶಿ ಭಾಗವಹಿಸಿದ ಕಟ್ಟಡಕಲಾ ನಿಪುಣ ಜಿ.ಎಚ್.ಕ್ರುಂಬಿಗಲ್, ಮೈಸೂರು ನಗರದ ೨೦ನೆಯ ಶತಮಾನದ ಅರಮನೆಯ ಕಟ್ಟಡಗಳಿಗೆ ಅಪಾರ ಕಾಣಿಕೆ ನೀಡಿದ್ದಾನೆ. ಅರಮನೆಗೆ ಇಂಥ ಶಿಖರ (ಡೂಮ್) ಇರಬೇಕೆಂದು ಮಹಾರಾಜರೊಂದಿಗೆ ಚರ್ಚಿಸಿ ನಿಶ್ಚಯಿಸಿದವನೀತ. ಈ ಸುವರ್ಣ ಕಳಸಕ್ಕೆ 'ರಜಪುಟಾಣ ಗುಮ್ಮಟ' ಎಂದೇ ಕರೆದ. ಇದಕ್ಕೆ ತಾಮ್ರದ ತಳಹದಿ ಆಧಾರ. ಆದರೆ ಒಂಭತ್ತು ವಿಭಾಗಗಳಿಗೆ ಚಿನ್ನದ ಲೇಪನ ಮಾಡಲಾಗಿದೆ. ಇದು ದರ್ಬಾರ್‌ಹಾಲ್‌ನ ಕೇಂದ್ರೀಕೃತ ಶಿಖರದ ಭಾಗಗಳನ್ನೊಳಗೊಂಡಿದೆ. ಜತೆಗೆ ೧೪ ಸಣ್ಣದಾದ ಗೋಪುರಗಳೂ ಇವೆ. ದರ್ಬಾರ್‌ಹಾಲ್‌ನ ತುತ್ತತುದಿಯಲ್ಲಿ ಕೆಂಪು ದೀಪದ ಸುವರ್ಣ ಕಳಸ ಇದೆ. ಈ ಡೂಮ್‌ಗೆ ಬಳಸಿರುವ ಚಿನ್ನ ೯ ತೊಲಗಳಷ್ಟು. ಅಂದರೆ ತಾಮ್ರದ ಕಳಸಗಳಿಗೆ ಚಿನ್ನದ ಮುಲಾಮು ಲೇಪಿಸಲಾಗಿದೆ. ಈ ರಜಪುಟಾಣ ಡೂಮ್‌ನ ನಿರ್ಮಾಣ ಕಾರ್ಯ ೧೯೩೫ರ ಸೆಪ್ಟೆಂಬರ್‌ನಲ್ಲಿ ಮುಗಿಯಿತು. ಆಗ ಅರಮನೆಯ ಎಂಜಿನಿಯರ್ ಆಗಿದ್ದವರು ಎನ್.ವಿ. ಬಾಪಟ್. ಅರಮನೆಯನ್ನು ಸಾರ್ವಜನಿಕ ಅರಮನೆ ಹಾಗೂ ಖಾಸಗಿ ಅರಮನೆ ಎಂದು ವಿಭಾಗಿಸಬಹುದು. ಅರಮನೆಯ ಮುಂಭಾಗ ಸಾರ್ವಜನಿಕ ಅರಮನೆಯಾದರೆ ಹಿಂಭಾಗ (ಪಶ್ಚಿಮ), ಖಾಸಗಿ ಅರಮನೆಯಾಗಿದೆ. ಹಿಂಭಾಗದ ಉತ್ತರ ಭಾಗದಲ್ಲಿ ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕುಟುಂಬದವರು ವಾಸಿಸುತ್ತಿದ್ದಾರೆ. ಮುಂಭಾಗ ಕರ್ನಾಟಕ ಸರ್ಕಾರದ ಅಧೀನದಲ್ಲಿದ್ದು, ಅದನ್ನು ನಿಗದಿತ ವೇಳೆಯಲ್ಲಿ ಸಾರ್ವಜನಿಕರು ವೀಕ್ಷಿಸಬಹುದು. ಮೈಸೂರು ನಗರಕ್ಕೆ ೧೯೦೮ರಲ್ಲಿ ವಿದ್ಯುತ್ ಸೌಲಭ್ಯ ಲಭಿಸಿತು. ಮೈಸೂರು ಅರಮನೆ ಕಟ್ಟಡಕ್ಕೆ ೧೯೨೫ರಲ್ಲಿ ವಿದ್ಯುದ್ದೀಪಾಲಂಕಾರವನ್ನು ಒದಗಿಸಲಾಯಿತು. ತತ್ಪರಿಣಾಮವಾಗಿ ರಾತ್ರಿಯಲ್ಲಿ ದೀಪಾಲಂಕೃತಗೊಂಡು ಜಗಜಗಿಸುವ ಅರಮನೆಯು ಕಿನ್ನರಲೋಕವನ್ನು ಸೃಷ್ಟಿಸುತ್ತಿದ್ದು ಇತ್ತೀಚೆಗೆ 'ಧ್ವನಿ–ಬೆಳಕು' ಕಾರ್ಯಕ್ರಮವನ್ನು ಸಂಯೋಜಿಸಲಾಗುತ್ತಿದ್ದು, ಅದೂ ಸದ್ಯದಲ್ಲೇ ಕಾರ್ಯರೂಪಕ್ಕೆ ಬರುವ ನಿರೀಕ್ಷೆಯಿದೆ.

ಅರಮನೆಯಲ್ಲಿ ನೆಲಮಹಡಿ, ಒಂದನೆಯ ಹಾಗೂ ಎರಡನೆ ಮಹಡಿಗಳೆಂಬ ಮೂರು ಮಹಡಿಗಳಿವೆ. ನೆಲಮಹಡಿಯಲ್ಲಿ ಗೊಂಬೆತೊಟ್ಟಿ, ಕಲ್ಯಾಣ ಮಂಟಪ, ಆಯುಧ ಶಾಲೆ, ಕರಿಕಲ್ಲು ತೊಟ್ಟಿ, ಸಮ್ಮುಖ ತೊಟ್ಟಿ, ಕಮಾನು ತೊಟ್ಟಿ, ಬೊಕ್ಕಸದ ತೊಟ್ಟಿ, ಕನ್ನಡಿ ತೊಟ್ಟಿ, ಜಂತದ ತೊಟ್ಟಿ, ರಂಗಮಂಟಪದ ತೊಟ್ಟಿ, ಮುಂತಾದ

ತೊಟ್ಟಿಗಳೂ; ಲಕ್ಷ್ಮಿ ವಿಲಾಸ, ರಮಾವಿಲಾಸ, ರಾಜೇಂದ್ರವಿಲಾಸ, ಕೃಷ್ಣ ವಿಲಾಸ, ಸೀತಾವಿಲಾಸ, ಮದನ ವಿಲಾಸ, ಮನೋವಿಲಾಸ, ಚಂದ್ರ ವಿಲಾಸ, ಮೊದಲಾದ ರಾಣಿ ವಿಲಾಸಗಳೂ ಇವೆ. ಒಂದನೆಯ ಮಹಡಿಯಲ್ಲಿ ಅಂಬಾ ವಿಲಾಸ, ದರ್ಬಾರ್ ಸಭಾಂಗಣ ದಿವಾನ್–ಎ–ಖಾಸ್, ರಾಣೀವಾಸದ ವಿಭಾಗ ಹಾಗೂ ಪೂಜಾ ಕೊಠಡಿಗಳಿದ್ದು, ದರ್ಬಾರ್ ಸಭಾಂಗಣವು ಚಿತ್ತಾಕರ್ಷಕವಾಗಿದೆ. ಎರಡನೆಯ ಮಹಡಿಯಲ್ಲಿ ಹಲವಾರು ಕೊಠಡಿ ಹಾಗೂ ದೊಡ್ಡದಾದ ಹಜಾರವಿದೆ. ಅರಮನೆಯ ಆವರಣದಲ್ಲಿದ್ದ ಮೂರು ಬಿಡದಿಗಳು ಈಗ ಸಾರ್ವಜನಿಕ ಆಡಳಿತ ಕಛೇರಿಗಳಾಗಿವೆ.

**ಚಿನ್ನದ ಸಿಂಹಾಸನ :** ಮೈಸೂರು ಅರಮನೆಯ ವಿಶೇಷ ಆಕರ್ಷಣೆ ಚಿನ್ನದ ಸಿಂಹಾಸನ. ಇದು **'ಕರ್ನಾಟಕ ರತ್ನ ಸಿಂಹಾಸನ'** ಎಂದೇ ಪ್ರಸಿದ್ಧವಾಗಿದೆ. ಅತ್ಯಂತ ಪುರಾತನ ವಸ್ತುವಾಗಿದ್ದು, ಅದನ್ನು ನೋಡುವುದೇ ಒಂದು ಸೌಭಾಗ್ಯವೆಂದು ಜನ ಭಾವಿಸಿದ್ದಾರೆ. ದಸರಾ ಸಂದರ್ಭದಲ್ಲಿ ಮಾತ್ರ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗುವ ಈ ಸಿಂಹಾಸನವನ್ನು ಆಗ ಅರಮನೆಯ ಖಾಸ ದರ್ಬಾರ್‌ಹಾಲ್ (ದಿವಾನ್–ಇ–ಖಾಸ್) ಮಧ್ಯಭಾಗದಲ್ಲಿ ಇಡಲಾಗುತ್ತದೆ. ದಸರಾ ಮಹೋತ್ಸವ ನಡೆಯುವ ಸಂದರ್ಭದಲ್ಲಿ ಈಗಲೂ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಒಂಬತ್ತು ದಿನಗಳ ಕಾಲ ಅದಕ್ಕೆ ಪೂಜೆ ಸಲ್ಲಿಸಿ, ಸಿಂಹಾಸನಾರೋಹಣ ಮಾಡುತ್ತಾರೆ. ಈ ಸಿಂಹಾಸನವನ್ನು ಮೂಲತ: ಅತ್ತಿಮರದಿಂದ ಮಾಡಿ ದಂತದ ಫಲಕಗಳಿಂದ ಅಲಂಕರಿಸಲಾಗಿದ್ದು, ಕಾಲಾನಂತರ ಅದಕ್ಕೆ ಬಂಗಾರದ ತಗಡು ಹಾಗೂ ಬೆಳ್ಳಿಯ ಮೂರ್ತಿಗಳನ್ನು ಸೇರಿಸಿ ಆಕರ್ಷಕವಾಗಿ ಅಲಂಕರಿಸಲಾಯಿತೆಂದು ತಿಳಿದುಬರುತ್ತದೆ.

**ಚಿನ್ನದ ಅಂಬಾರಿ :** ದಸರಾ ಮೆರವಣಿಗೆಯ ವಿಶೇಷ ಆಕರ್ಷಣೆ ಇದಾಗಿದೆ. ಅಂಬಾರಿಯು ಮಂಟಪದ ಆಕಾರದಲ್ಲಿದ್ದು, ಅದನ್ನು ಮರದಿಂದ ಮಾಡಿ ಅದಕ್ಕೆ ಬಗೆ ಬಗೆಯ ಬಳ್ಳಿಗಳು, ಎಲೆಗಳು ಮತ್ತು ಹೂವುಗಳ ವಿನ್ಯಾಸವಿರುವ ಚಿನ್ನದ ತಗಡನ್ನು ಹೊದಿಸಲಾಗಿದೆ. ಚಿನ್ನದ ತಗಡಿನ ಸೂಕ್ಷ್ಮ ಕೆಲಸಗಳಿಂದಾಗಿ ಅಂಬಾರಿ ಫಳಫಳನೆ ಹೊಳೆಯುತ್ತದೆ. ಅದರ ನೆತ್ತಿಯಲ್ಲಿ ಪಂಚಕಳಶಗಳಿದ್ದು, ಅವನ್ನು ಮರದಿಂದ ಮಾಡಿ ಅವಕ್ಕೆ ಬಂಗಾರದ ಬಣ್ಣವನ್ನು ಲೇಪಿಸಲಾಗಿದೆ. ಕಳಶದ ಎದುರು ಕೆಂಪು ಹಾಗೂ ಹಸುರುಬಣ್ಣದ ಎರಡು ಸೂಚಕ ವಿದ್ಯುತ್ ದೀಪಗಳನ್ನು ಜೋಡಿಸಲಾಗಿದೆ. ಅವಕ್ಕೆ ಬ್ಯಾಟರಿಯಿಂದ ವಿದ್ಯುತ್ ಪೂರೈಕೆಯಾಗುತ್ತದೆ. ದೀಪಗಳ ಈ ಸೂಚನೆ, ಹಿಂದೆ ದಸರೆಯಲ್ಲಿ ಮೆರವಣಿಗೆ ಮುಂದೆ ಸಾಗುವುದಕ್ಕೂ ನಿಲ್ಲುವುದಕ್ಕೂ ನೀಡುವ ಸೂಚನೆಯಾಗಿತ್ತು. ಅಂಬಾರಿಗೆ ಸಂಪೂರ್ಣ ದಂತದಿಂದಲೇ ತಯಾರಿಸಿದ ಎರಡು ಆಕರ್ಷಕ ಚಾಮರಗಳನ್ನು ಅಳವಡಿಸಲಾಗಿದೆ. ಹಿಂದೆ, ದಸರಾದಲ್ಲಿ ವಿಜಯದಶಮಿಯಂದು ಜರುಗುತ್ತಿದ್ದ ಜಂಬೂಸವಾರಿಯಲ್ಲಿ ಆನೆಗೆ ಅಂಬಾರಿಯನ್ನು ಬಿಗಿದುಕಟ್ಟಿ ಮಹಾರಾಜರು ಕುಳಿತುಕೊಳ್ಳುತ್ತಿದ್ದರು. ಇಂದಿಗೂ ದಸರಾ ಮೆರವಣಿಗೆಯಲ್ಲಿ ಆ ಚಿನ್ನದ ಅಂಬಾರಿಯನ್ನು ಆನೆಯ ಮೇಲಿಟ್ಟು ಚಾಮುಂಡೇಶ್ವರಿ (ಭುವನೇಶ್ವರಿ) ವಿಗ್ರಹವನ್ನಿಟ್ಟು ಶಾಸ್ತ್ರೋಕ್ತವಾಗಿ ಕೊಂಡೊಯ್ಯಲಾಗುತ್ತದೆ. ಇದರ ನಿರ್ಮಾಣಕ್ಕೆ ಒಟ್ಟು

೮೦ ಕಿಲೋ ಚಿನ್ನವನ್ನು ಬಳಸಲಾಗಿದೆ. ಇದರ ಒಟ್ಟು ತೂಕ ಸುಮಾರು ೬೦೦ ಕಿಲೋ ಗ್ರಾಂಗಳು.

**ಮೈಸೂರು ದಸರಾ:** ವಿಜಯನಗರದರಸರು ಆರಂಭಿಸಿದ ವಿಜಯದಶಮಿಯು ಮೈಸೂರು ಅರಸರಿಂದ ಮುಂದುವರಿಸಲ್ಪಟ್ಟು ಅದರ ನೆನಪಾಗಿ ಶ್ರೀರಂಗಪಟ್ಟಣದಲ್ಲಿ ಇಂದಿಗೂ 'ಮಹಾನವಮಿದಿಬ್ಬ' ಎಂಬ ಪ್ರದೇಶವಿದೆ. ಮೈಸೂರು ಒಡೆಯರು, ರಾಜಧಾನಿ ಮೈಸೂರಿನಲ್ಲಿ ಹಿಂದೆ ಹತ್ತುದಿನ ವಿಜೃಂಭಣೆಯಿಂದ ಆಚರಿಸುತ್ತಿದ್ದ ದಸರೆಯು ಅಷ್ಟಮಿಯಂದು ದುರ್ಗಾಪೂಜೆ, ನವಮಿಯಂದು ಆಯುಧಪೂಜೆ ಹಾಗೂ ದಶಮಿಯಂದು ಶಮಿಪೂಜೆ ಆಚರಿಸುವುದರೊಂದಿಗೆ ಉತ್ತುಂಗಕ್ಕೇರುತ್ತಿತ್ತು. ಆ ದಿನಗಳಲ್ಲಿ ಪ್ರತಿದಿನಸಂಜೆ ಅರಮನೆಯಲ್ಲಿ ರಾಜದರ್ಬಾರು; ಸೇನೆಗಳ ಕವಾಯ್ತು, ಪಟ್ಟದ ಆನೆ–ಕುದುರೆ, ಎತ್ತುಗಳ ಮೆರವಣಿಗೆಯು ಅರಮನೆಯ ಆವರಣದಲ್ಲಿ ವಿಜೃಂಭಣೆಯಿಂದ ನಡೆಯುತ್ತಿದ್ದು, ವಿಜಯದಶಮಿಯಂದು ಮಹಾರಾಜರೊಂದಿಗೆ ಸೋದರಮಾವ ಹಾಗೂ ಯುವರಾಜರನ್ನು ಚಿನ್ನದ ಅಂಬಾರಿಯಲ್ಲಿ ಹೊತ್ತ ಸರ್ವಾಲಂಕೃತ ಆನೆಯ ಗಂಭೀರ ನಡೆಯ ಜಂಬೂಸವಾರಿ ದೃಶ್ಯವಿಂದು ನೆನಪಾಗಷ್ಟೇ ಉಳಿದಿದೆ. ಆದರೆ ೧೯೭೧ರ ನಂತರ ಜನತಾ ದಸರಾ ಆಚರಣೆಗೆ ಬಂದು, ಜಂಬೂಸವಾರಿಯಲ್ಲಿ ಆಳರಸರ ಬದಲು ಭುವನೇಶ್ವರಿಯನ್ನು ಮೆರವಣಿಗೆಯಲ್ಲಿ ಕೊಂಡ್ಯೊಯ್ಯುವ ಪದ್ಧತಿ ಜಾರಿಗೆ ಬಂದು, ವರ್ಷದಿಂದ ವರ್ಷಕ್ಕೆ ಹೊಸ ಮಜಲುಗಳನ್ನು ಅಳವಡಿಸಿಕೊಳ್ಳುವ ಮೂಲಕ ಹೆಚ್ಚೆಚ್ಚು ಆಕರ್ಷಣೀಯವಾಗುತ್ತಿದೆ. ೨೦೦೭ರ ದಸರಾದಲ್ಲಿ ಯುವದಸರಾ ಉತ್ಸವ ವಿಶೇಷ ಗಮನ ಸೆಳೆದಿತ್ತು. ವರ್ಷದಿಂದ ವರ್ಷಕ್ಕೆ ಮೈಸೂರು ದಸರಾ ಹೊಸ ಆಯಾಮಗಳೊಂದಿಗೆ ಹೆಚ್ಚೆಚ್ಚು ವೈವಿಧ್ಯಮಯವಾಗುತ್ತಿದೆ.

**ನಗರದ ಅರಮನೆಗಳು :** ಮೈಸೂರು ನಗರಕ್ಕೆ ಅರಮನೆಗಳ ನಗರ ಎಂಬ ಹೆಗ್ಗಳಿಕೆಯೂ ಇದೆ. ಮೈಸೂರು ಅರಸರ ಕಾಲದಲ್ಲಿ ರಾಜವಂಶಜರ ವಸತಿ ಸೌಕರ್ಯಕ್ಕಾಗಿ ನಿರ್ಮಾಣಗೊಂಡ ಮಹಲುಗಳೇ ಈ ಅರಮನೆಗಳಾಗಿವೆ.

**ಜಗನ್ಮೋಹನ ಅರಮನೆ :** ಇದು ಮೈಸೂರು ಅರಮನೆಯ ಪಶ್ಚಿಮ ದಿಕ್ಕಿನಲ್ಲಿ, ನಗರದ ಹೃದಯಭಾಗದಲ್ಲಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ೧೮೬೧ ರಲ್ಲಿ ಇದನ್ನು ನಿರ್ಮಿಸಿದರು. ೧೮೯೭ ರಲ್ಲಿ ಅಂಬಾವಿಲಾಸ ಅರಮನೆ ಅಗ್ನಿಗೆ ಆಹುತಿಯಾದಾಗ ರಾಜಕುಟುಂಬದವರಿಗೆ ಇದು ತಾತ್ಕಾಲಿಕ ನಿವಾಸವಾಗಿತ್ತು. ೧೯೧೫ರಲ್ಲಿ ರಾಜಪರಿವಾರದವರು ನೂತನ ಅರಮನೆಗೆ ಸ್ಥಳಾಂತರಗೊಂಡ ಮೇಲೆ ಇದನ್ನು ಕಲಾವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸಲಾಯಿತು. ಏತನ್ಮಧ್ಯೆ ೧೯೦೦ ರಲ್ಲಿ ನಾಲ್ಕನೆ ಕೃಷ್ಣರಾಜಒಡೆಯರ ವಿವಾಹ, ೧೯೦೨ ರಲ್ಲಿ ಪಟ್ಟಾಭಿಷೇಕ ಹಾಗೂ ಯುವರಾಜರ ವಿವಾಹ ಮಹೋತ್ಸವ ಮುಂತಾದವನ್ನು ಇಲ್ಲಿಯೇ ನಡೆಸಲಾಗಿತ್ತು. ಹಿಂದಿನ ಮೈಸೂರು ರಾಜ್ಯದ ಪ್ರಜಾಪ್ರತಿನಿಧಿಸಭೆಯು (೧೮೮೧) ಇಲ್ಲಿಯೇ ಸಮಾವೇಶಗೊಳ್ಳುತ್ತಿತ್ತು. ಈಗ ಪ್ರತಿ ವರ್ಷವೂ ದಸರಾ ಕವಿಗೋಷ್ಠಿ ಮುಂತಾದ

ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ಜರುಗುತ್ತಿರುತ್ತವೆ. ಜಗನ್ಮೋಹನ ಅರಮನೆ ಇಂದು ಅಪೂರ್ವ ಕಲಾವಸ್ತು ಸಂಗ್ರಹಾಲಯವಾಗಿದ್ದು, ಅನೇಕ ಭಿತ್ತಿಚಿತ್ರಗಳು, ದಸರಾ ವಸ್ತುಪ್ರದರ್ಶನದಲ್ಲಿ ಬಹುಮಾನ ಪಡೆದ ಕೃತಿಗಳು, ದಂತ, ಪಿಂಗಾಣಿ, ಗಂಧದ ಕಲಾಕೃತಿಗಳು, ಸಂಗೀತ ವಾದ್ಯಗಳು, ವಿಶಿಷ್ಟ ಗಡಿಯಾರ ಅಲಂಕಾರಿಕ ವಸ್ತುಗಳು, ಹೈದರ್‌ಅಲಿ ಟಿಪ್ಪುವಿನ ಕಾಲದ ಫರಾ ವಸ್ತುಗಳು, ರಾಜಾ ರವಿವರ್ಮ ವಿರಚಿತ ವರ್ಣಚಿತ್ರ ಮೈಸೂರು ಒಡೆಯರ ವಂಶಾವಳಿಯನ್ನು ಬಿಂಬಿಸುವ ಚಿತ್ರಗಳೇ ಮುಂತಾದವು ಇಲ್ಲಿವೆ.

**ಲಲಿತಮಹಲ್ ಅರಮನೆ :** ಮೈಸೂರು–ತಿರುಮಕೂಡಲು ನರಸೀಪುರ ರಸ್ತೆಯಲ್ಲಿ ನಗರದಿಂದ ಐದು ಕಿ.ಮೀ. ದೂರದಲ್ಲಿ, ಈ ಭವ್ಯ ಅರಮನೆ ನಿರ್ಮಾಣಗೊಂಡಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ವಿದೇಶಿ ಅತಿಥಿಗಳ ವಾಸ್ತವ್ಯಕ್ಕಾಗಿ ೧೯೩೧–೩೦ರಲ್ಲಿ ಇದನ್ನು ಕಟ್ಟಿಸಿದರು. ಮುಂಬಯಿಯ ಪ್ರಸಿದ್ಧ ವಾಸ್ತುಶಿಲ್ಪಿ ಫ್ರಿಟ್‌ಜ್ಞೆ ಎಂಬುವರು ಇದರ ವಿನ್ಯಾಸಕಾರರು. ಆಗ ಇದರ ನಿರ್ಮಾಣ ವೆಚ್ಚ ೧೩ ಲಕ್ಷ ರೂಪಾಯಿಗಳು. ಈ ಮಹಲಿನ ಮುಂಭಾಗದ ವಿಶಾಲ ಪ್ರಾಂಗಣದಲ್ಲಿ, ಸುಂದರ ಹೂದೋಟ, ಈಜುಕೊಳಗಳಿವೆ. ಅರಮನೆಯ ಮುಂದಿನ ವಿಶಾಲ ಪೋರ್ಟಿಕೊ, ಜೋಡಿ ಕಂಬಗಳ ಸಾಲಿನಿಂದ ಅಲಂಕೃತವಾದ ಪಡಸಾಲೆ, ಎತ್ತರದ ದಿಂಡಿನ ಮೇಲೆ ನಿಂತ ಗುಮ್ಮಟಗಳು, ಗೋಡೆಯ ಮೇಲಿನ ಕಲಾತ್ಮಕ ಚಿತ್ರಗಳು, ವೃತ್ತಾಕಾರದ ಹಜಾರ, ಮರದ ಬಾಗಿಲುಗಳ ಮೇಲೆ ಕೆತ್ತಿರುವ ಅದ್ಭುತ ಕುಸುರಿ ಕೆಲಸ, ಬಣ್ಣದ ಚಿತ್ರಗಳುಳ್ಳ ಕಿಟಕಿಯ ಪಾರದರ್ಶಕ ಗಾಜುಗಳು ಅರಮನೆಯ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಇಡೀ ಕಟ್ಟಡದ ನೆಲ ಮತ್ತು ಮೆಟ್ಟಿಲುಗಳಿಗೆ ಇಟಲಿಯ ವೆನ್ನಿಸ್‌ನಗರದಿಂದ ತರಿಸಿದ ಅಮೃತಶಿಲೆಯನ್ನು ಅಳವಡಿಸಲಾಗಿದೆ. ಸುಂದರ ನೃತ್ಯಶಾಲೆಯೂ ಈ ಕಟ್ಟಡದ ಪ್ರಮುಖ ಆಕರ್ಷಣೆ. ೧೯೫೫ರಲ್ಲಿ ಈ ಅರಮನೆಯು ರಾಜಮನೆತನದಿಂದ ಕರ್ನಾಟಕ ಸರ್ಕಾರಕ್ಕೆ ಹಸ್ತಾಂತರವಾಯಿತು. ಕೋಲ್ಕತ್ತಾದ ವಿಕ್ಟೋರಿಯ ಮೆಮೋರಿಯಲ್ ಕಟ್ಟಡವನ್ನು ನೆನಪಿಗೆ ತರುವ ಈ ಅರಮನೆ ಇಂದು ಭಾರತೀಯ ಪ್ರವಾಸೋದ್ಯಮ ಇಲಾಖೆಯ ಆಡಳಿತದಲ್ಲಿರುವ ಶ್ರೇಷ್ಠ ಪಂಚತಾರ ಹೋಟೆಲಾಗಿದೆ. ಈಗಲೂ ರಾಷ್ಟ್ರದ ಗಣ್ಯರು ಬಂದರೆ ಉಳಿದುಕೊಳ್ಳುವುದು ಇಲ್ಲಿಯೇ. ಇದನ್ನು 'ಮೈಸೂರಿನ ವೈಟ್‌ಹೌಸ್' ಎಂದೂ ಕರೆಯುತ್ತಾರೆ.

ಈ ಪ್ರಮುಖ ಅರಮನೆಗಳಲ್ಲದೆ, ಜಯಲಕ್ಷ್ಮೀವಿಲಾಸ, ಚೆಲುವಾಂಬಾ ವಿಲಾಸ, ಲೋಕರಂಜನ್ ಮಹಲ್, ಚಾಮುಂಡಿ ವಿಹಾರ್, ಗೌರ‍್ನಮೆಂಟ್ ಗೆಸ್ಟ್‌ಹೌಸ್, ಕಾರಂಜಿ ವಿಲಾಸ, ವಸಂತ ಮಹಲ್, ಆಲೋಕ (ಇಲವಾಲ ಬಳಿ), ಬೆಟ್ಟದ ಮೇಲಿರುವ ರಾಜೇಂದ್ರ ವಿಲಾಸ ಮುಂತಾದ ಅರಮನೆಗಳೂ ಮೈಸೂರಿನಲ್ಲಿದ್ದು, ಅವುಗಳಲ್ಲಿ ಕೆಲವು ಇಂದು ಸರ್ಕಾರದ ಅತಿಥಿ ಗೃಹ, ಕಛೇರಿ, ಹೋಟೆಲು ಹಾಗೂ ಖಾಸಗಿ ನಿವಾಸಗಳಾಗಿ ಪರಿವರ್ತಿತವಾಗಿವೆ. ಅಲ್ಲದೇ, ನಜರಾಬಾದ್ ನಲ್ಲಿರುವ ಟಬೇಲಿ, ಪ್ಯಾಲೇಸ್ ಗ್ಯಾರೇಜ್, ಪ್ಯಾಲೇಸ್ ಬ್ಯಾಂಡ್; ಜಾಕಿಕ್ವಾರ್ಟರ್ಸ್‌ನಲ್ಲಿರುವ ಅಂಚೆಕಛೇರಿ

ಕಟ್ಟಡ, ಆಡಳಿತ ತರಬೇತಿ ಕೇಂದ್ರ ಮುಂತಾದ ೧೩೦ಕ್ಕೂ ಹೆಚ್ಚು ಕಟ್ಟಡಗಳು ಅಂದಿನ ಪರಂಪರೆಯ ಪ್ರತೀಕಗಳಾಗಿ ಉಳಿದು ಬಂದಿದ್ದು, ಇವುಗಳಲ್ಲಿ ಹೆಚ್ಚಿನವನ್ನು ಪಾರಂಪರಿಕ ಕಟ್ಟಡವೆಂದು ಸಂರಕ್ಷಿಸಲು ಕ್ರಮಕೈಗೊಳ್ಳಲಾಗಿದೆ.

**ದೇವಾಲಯಗಳು :** ಅರಮನೆಗಳಂತೆಯೇ, ಅರಮನೆಯ ಆವರಣ ಹಾಗೂ ನಗರದ ವಿವಿಧೆಡೆಗಳಲ್ಲಿರುವ ಮೈಸೂರರಸರ ಕಾಲದ ದೇವಾಲಯಗಳೂ ಮೈಸೂರಿನ ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಾಗಿವೆ. ಅವು ತಮ್ಮ ಭವ್ಯತೆಯಿಂದ, ವಿಸ್ತಾರ ಔನ್ನತ್ಯಗಳಿಂದ, ಹಾಗೂ ಎತ್ತರದ ಗೋಪುರ, ಮೂರ್ತಿಶಿಲ್ಪ, ಭಿತ್ತಿಚಿತ್ರಗಳ ವೈಭವದಿಂದ ಪ್ರವಾಸಿಗರನ್ನು ಸೆಳೆಯುತ್ತಿವೆ. ಅರಮನೆಯ ಆವರಣ ಒಂದು ರೀತಿಯಲ್ಲಿ ದೇವಾಲಯಗಳ ಸಮುಚ್ಚಯವೆನಿಸಿದೆ. ಇಲ್ಲಿ ಕೋಡಿಭೈರವೇಶ್ವರ, ಲಕ್ಷ್ಮೀರಮಣಸ್ವಾಮಿ, ಶ್ವೇತ ವರಾಹಸ್ವಾಮಿ, ತ್ರಿನಯನೇಶ್ವರಸ್ವಾಮಿ, ಪ್ರಸನ್ನ ಕೃಷ್ಣಸ್ವಾಮಿ, ಕೋಟೆ ವೆಂಕಟರಮಣಸ್ವಾಮಿ, ಭುವನೇಶ್ವರಿ, ಗಾಯತ್ರಿ, ಕೋಡಿಸೋಮೇಶ್ವರ, ಆಲಮೇಲಮ್ಮ, ಕೋಟೆ ಆಂಜನೇಯ ಸ್ವಾಮಿ, ಸಂಜೀವಿನಿ, ಆಂಜನೆಯ ಮುಂತಾದ ದೇವಾಲಯಗಳಿವೆ.

**ಕೋಡಿಭೈರವೇಶ್ವರ ದೇವಾಲಯ :** ಇದು ಅರಮನೆಯ ಪೂರ್ವಕ್ಕಿರುವ ದೊಡ್ಡಕೆರೆ ಕೋಡಿಯ ಹತ್ತಿರವಿದೆ. ಧಾರ್ಮಿಕ ಮಹತ್ವ ಇರುವಂತೆಯೇ ಐತಿಹಾಸಿಕ ಹಿರಿಮೆಯೂ ಅದಕ್ಕುಂಟು. ಒಡೆಯರ ಮನೆತನದೊಂದಿಗೆ ನಿಕಟ ಸಂಪರ್ಕವುಳ್ಳ ಇದು ಅರಮನೆಯ ದೇವಾಲಯಗಳಲ್ಲೇ ಪ್ರಾಚೀನವಾದುದು. ಒಡೆಯರ ವಂಶದ ಆದ್ಯಪ್ರವರ್ತಕರಾದ ಯದುರಾಯ ಹಾಗೂ ಕೃಷ್ಣರಾಯರು ಈ ದೇವಸ್ಥಾನದ ಪ್ರಾಂಗಣದಲ್ಲಿ ಒಂದು ಇರುಳು ಕಳೆದರೆಂಬುದೊಂದು ಐತಿಹ್ಯ. ಈ ದೇಗುಲದಲ್ಲಿ ಮೂರು ಅಡಿ ಎತ್ತರದ ಭೈರವನ ಸುಂದರ ಪ್ರತಿಮೆ ಇದೆ. ಅದಕ್ಕೆ ಚತುರ್ಭುಜಗಳಿದ್ದು, ಕೈಗಳಲ್ಲಿ ತ್ರಿಶೂಲ, ಡಮರುಗ, ರುಂಡ ಹಾಗೂ ಖಡ್ಗವಿದೆ. ಇದರ ಎಡಭಾಗದಲ್ಲಿ ಭದ್ರಕಾಳಿಯ ವಿಗ್ರಹವಿದ್ದು ಅದರ ಮೇಲೆತ್ತಿದ್ದ ಬಲಕೈನಲ್ಲಿ ಕುಡುಗೋಲಿದೆ. ಕೋಟೆಯೊಳಗಿದ್ದ ಕಟ್ಟಡಗಳನ್ನು ಕೆಡವಲು ಜನ ಮುಂದಾದಾಗ ನಾಲ್ವಡಿ ಕೃಷ್ಣರಾಜ ಒಡೆಯರು ಇದನ್ನು ರಕ್ಷಿಸಿದರು. ಇಂದು ಈ ಕೆರೆ ದಸರಾ ವಸ್ತು ಪ್ರದರ್ಶನದ ಮೈದಾನವಾಗಿ ಮಾರ್ಪಟ್ಟಿದೆ.

**ಕೋಡಿ ಸೋಮೇಶ್ವರ ದೇವಾಲಯ :** ಇದು ಅರಮನೆ ಕೋಟೆಯ ಈಶಾನ್ಯ ದಿಕ್ಕಿನಲ್ಲಿ ನವಗ್ರಹ ಗುಡಿಗಳ ಬಳಿ ಇದೆ. ಇಲ್ಲಿ ಮೂರು ಗುಡಿಗಳಿದ್ದು, ಮಧ್ಯದಲ್ಲಿ ಸೋಮೇಶ್ವರ ಲಿಂಗ, ಅದರ ಬಲಭಾಗದ ಕೋಣೆಯಲ್ಲಿ ಸೋಮಸುಂದರೀದೇವಿ ಹಾಗೂ ಎಡಭಾಗದಲ್ಲಿ ನಾರಾಯಣನ ವಿಗ್ರಹಗಳಿವೆ. ಇದರ ಎದುರಿಗೆ ನವಗ್ರಹ ಕಟ್ಟೆ ಇದೆ. ಸೋಮೇಶ್ವರ ಲಿಂಗ ಸುಮಾರು ಒಂದೂವರೆ ಅಡಿ ಎತ್ತರವಿದ್ದು, ಅದನ್ನು ಚೋಳರಾಜ ಪ್ರತಿಷ್ಠಾಪಿಸಿದ್ದೆಂದೂ ಪ್ರತೀತಿ. ಇದಕ್ಕೆ ಹೊಂದಿಕೊಂಡಂತೆ ದಕ್ಷಿಣದಲ್ಲಿ ದಕ್ಷಿಣಾಮೂರ್ತಿ, ಉತ್ತರದಲ್ಲಿ ಕೋಡಿಭೈರವೇಶ್ವರನ ವಿಗ್ರಹಗಳಿವೆ. ಭೈರವ ವಿಗ್ರಹ ಸುಮಾರು ಮೂರು ಅಡಿ ಎತ್ತರವಾಗಿದ್ದು ಕೈಗಳಲ್ಲಿ ತ್ರಿಶೂಲ, ಡಮರುಗ, ಖಡ್ಗ ಮತ್ತು ರುಂಡಗಳಿವೆ. ಬಲಭಾಗದಲ್ಲಿ ಚೌರಿಯನ್ನು ಹಿಡಿದ ಸ್ತ್ರೀ ಹಾಗೂ ಎಡಭಾಗದಲ್ಲಿ ಭದ್ರಕಾಳಿ ಇದ್ದಾರೆ.

**ಕೋಟೆ ಆಂಜನೇಯ ಸ್ವಾಮಿ ದೇವಾಲಯ :** ಇದು ಅರಮನೆಯ ಉತ್ತರ ಭಾಗದ ಜಯರಾಮ, ಬಲರಾಮ ಕೋಟೆ ಬಾಗಿಲುಗಳ ಮಧ್ಯದಲ್ಲಿದೆ. ಇದಕ್ಕೆ ಮೂರು ಅಂತಸ್ತಿನ ಗೋಪುರವಿದ್ದು, ಅದಕ್ಕೂ ವಿದ್ಯುದ್ದೀಪಗಳನ್ನು ಅಳವಡಿಸಲಾಗಿದೆ. ಇದನ್ನು ಭೋಗಾಂಜನೇಯ, ಮಕ್ಕಳಾಂಜನೇಯ, ಉದ್ಭವಮೂರ್ತಿ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಒಂದು ಐತಿಹ್ಯದಂತೆ ಈ ವಿಗ್ರಹ ಬೆಳಗೊಳದಲ್ಲಿ ದೊರೆಯಿತೆಂದೂ ಮತ್ತೊಂದು ಐತಿಹ್ಯದಂತೆ ಕಾರಂಜಿ ಕೆರೆ ಬಳೀ ದೊರೆತದ್ದನ್ನು ತಂದು ಇಲ್ಲಿ ಪ್ರತಿಷ್ಠಾಪಿಸಲಾಯಿತೆನ್ನಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ಕೋಟೆಯನ್ನು ವಿಸ್ತರಿಸುವಾಗ (೧೯೧೫) ಈ ಮೂರ್ತಿಯನ್ನು ಸ್ಥಳಾಂತರಿಸಲು ಹೊರಟಿದ್ದರು. ಆದರೆ ರಾಜಮಾತೆಯ ಆಜ್ಞೆಯಂತೆ ಸ್ಥಳಾಂತರಿಸದೆ ಅಲ್ಲೇ ಸುಂದರ ದೇವಾಲಯವನ್ನು ನಿರ್ಮಿಸಿದರು. ಒಂದೇ ದ್ವಾರದ ಬದಲು ಅದರ ಎಡಬಲಗಳಲ್ಲಿ ಜಯರಾಮ ಹಾಗೂ ಬಲರಾಮ ದ್ವಾರಗಳನ್ನು ನಿರ್ಮಿಸಿದರು. ಆ ವಿಗ್ರಹವು ನಾಲ್ಕು ಅಡಿ ಎತ್ತರವಿದ್ದು ಒರಟಾದ ಕೆಂಪುಕಲ್ಲಿನಿಂದ ಕಡೆಯಲಾಗಿದೆ. ವಿಗ್ರಹದ ಹಿಂಭಾಗದಲ್ಲಿ ಮಂಡಿಯೂರಿ ಕುಳಿತಿರುವ ಗರುಡನ ವಿಗ್ರಹವಿದೆ. ದೇವಾಲಯದೆದುರು ನಲವತ್ತು ಅಡಿ ಎತ್ತರದ ಗರುಡಗಂಬವಿದೆ.

**ಆತ್ಮವಿಲಾಸ ಗಣಪತಿ ದೇವಾಲಯ :** ಇದು ಮೈಸೂರು ಅರಮನೆಯ ಅತ್ಯಂತ ಪ್ರಾಚೀನ ಹಾಗೂ ಅತ್ಯಾಕರ್ಷಕ ದೇವಾಲಯಗಳಲ್ಲಿ ಪ್ರಮುಖವಾದ್ದು. ಅರಮನೆಯ ಒಟ್ಟು ಐವತ್ತೆರಡು ಗಣಪತಿಯ ಪೂಜಾವಿಗ್ರಹಗಳಲ್ಲಿ ಇದ್ದು ಹೆಚ್ಚು ಮಹತ್ವದ್ದು. ಹಳೆಯ ಅರಮನೆಯು (ಮರದಿಂದ ನಿರ್ಮಿಸಿದ್ದು) ೧೮೯೭ರಲ್ಲಿ ಅಗ್ನಿಗೆ ಆಹುತಿಯಾದಾಗ ಈ ವಿಗ್ರಹಕ್ಕೆ ಯಾವ ಅಪಾಯವೂ ಆಗಲಿಲ್ಲ. ಹೊಸ ಅರಮನೆ ನಿರ್ಮಿಸಿದಾಗ ಇದನ್ನು ಅರಮನೆಯೊಳಗೆ ಸೇರಿಸಲಾಯಿತು. ಇದು ಸುಮಾರು ಎಂಟು ಅಡಿ ಎತ್ತರವಿದ್ದು ಇದರ ಕೈಗಳಲ್ಲಿ ಪಾಶಾಂಕುಶಗಳಿವೆ. ಇದರಲ್ಲಿ ೩೦೦ ಪವಿತ್ರಕ್ಷೇತ್ರಗಳಿಂದ ಸಂಗ್ರಹಿಸಿರುವ ೪೫೦ ಸಾಲಿಗ್ರಾಮಗಳನ್ನು ಅಳವಡಿಸಲಾಗಿದೆ. ಈ ಮೂರ್ತಿಯನ್ನು ಮರದ ಪುಡಿ, ಸಗಣಿ ಹಾಗೂ ಮರಳಿನ ಮಿಶ್ರಣದಿಂದ ತಯಾರಿಸಿರುವುದು ವಿಶೇಷ.

**ಗಾಯತ್ರೀ ದೇಗುಲ :** ಇದು ಕೋಟೆಯ ಪೂರ್ವಭಾಗದ ಜಯಮಾರ್ತಾಂಡ ಮಹಾದ್ವಾರದ ದಕ್ಷಿಣಕ್ಕೆ ಪಶ್ಚಿಮಾಭಿಮುಖವಾಗಿದೆ. ಜಯಚಾಮರಾಜ ಒಡೆಯರು ತಮ್ಮ ಹಿರಿಯ ಮಗಳು ಗಾಯತ್ರೀದೇವಿಯ ನೆನಪಿಗಾಗಿ ಇದನ್ನು ಕಟ್ಟಿಸಿದರು (೧೯೫೩). ಇದರ ಗೋಪುರ ಉತ್ತುಂಗವಾಗಿದ್ದು, ಅಲ್ಲಿರುವ ಸಾವಿತ್ರಿ, ಗಾಯತ್ರಿ, ಸರಸ್ವತಿಯರ ಪ್ರತಿಮೆಗಳು ಸುಂದರವಾಗಿವೆ. ಗಾಯತ್ರಿ ವಿಗ್ರಹಕ್ಕೆ ಪಂಚಮುಖಗಳಿವೆ. ನವರಂಗದಲ್ಲಿ ಗಣೇಶ, ಶಿವ, ಸೂರ್ಯ ಹಾಗೂ ಮಹಾವಿಷ್ಣುವಿನ ಮೂರ್ತಿಗಳಿವೆ. ಹೊಯ್ಸಳ ವಾಸ್ತುಶೈಲಿಯಲ್ಲಿರುವ ಈ ದೇವಾಲಯದ ಶಿಲ್ಪಿ ಸಿದ್ಧಲಿಂಗಸ್ವಾಮಿ. ಇಲ್ಲಿಯ ಸರಸ್ವತಿ ಗರುಡಾರೂಢಳು, ಸಾವಿತ್ರಿ ವೃಷಭಾರೂಢಳು. ಸಾವಿತ್ರಿಯ ನಾಲ್ಕು ಕರಗಳಲ್ಲಿ ಜ್ವಾಲೆ, ತ್ರಿಶೂಲ, ಮಣಿ ಹಾಗೂ ಗದೆಗಳಿವೆ. ಗಾಯತ್ರಿ ವಿಗ್ರಹದ ಆರು ಕೈಗಳಲ್ಲಿ ಶಂಖ.

ಚಕ್ರ, ಗದೆ, ತಾವರೆ, ಅಂಕುಶ ಹಾಗೂ ಪಾಶಗಳಿದ್ದರೆ, ಸರಸ್ವತಿಯ ಕರಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳಿವೆ.

**ಲಕ್ಷ್ಮೀರಮಣಸ್ವಾಮಿ ದೇವಾಲಯ :** ಕೋಟೆಯ ಪಶ್ಚಿಮಭಾಗದಲ್ಲಿರುವ ಈ ದೇವಾಲಯವು ೧೪೯೯ರಷ್ಟು ಪೂರ್ವದಲ್ಲೇ ಇತ್ತೆನ್ನಲಾಗಿದೆ. ಇದನ್ನು 'ನಂಬಿನಾರಾಯಣ' ಎಂದೂ ಕರೆಯುವರು. ಇದರ ಗೋಪುರ ಐದು ಅಂತಸ್ತುಗಳನ್ನು ಹೊಂದಿದ್ದು, ದ್ರಾವಿಡ ಶೈಲಿಯಲ್ಲಿದೆ. ಇದಕ್ಕಿರುವ ಮಹಾದ್ವಾರವನ್ನು ರಾಜ ಒಡೆಯರು ಕಟ್ಟಿಸಿದರು. ಲಕ್ಷ್ಮೀರಮಣನ ವಿಗ್ರಹ ನಾಲ್ಕು ಅಡಿ ಎತ್ತರವಿದ್ದು, ವಿಷ್ಣುವಿನಂತೆ ಇದಕ್ಕೂ ಶಂಖಚಕ್ರಗಳಿವೆ. ದೇವಸ್ಥಾನದ ಬಲಭಾಗದಲ್ಲಿ ಅಮ್ಮನವರ ವಿಗ್ರಹ ಹಾಗೂ ನವರಂಗದಲ್ಲಿ ಆಳ್ವಾರರು ಮತ್ತು ವೇಣುಗೋಪಾಲಸ್ವಾಮಿಯ ವಿಗ್ರಹಗಳಿವೆ. ಅಲ್ಲೇ ಕರಮುಗಿದು ನಿಂತಿರುವ ರಾಜ ಒಡೆಯರ ಭಕ್ತ ವಿಗ್ರಹವಿದೆ.

**ಶ್ವೇತವರಾಹಸ್ವಾಮಿ ದೇವಾಲಯ :** ಇದು ಕೋಟೆಯ ದಕ್ಷಿಣಕ್ಕೆ ವರಾಹದ್ವಾರದ ಬಳಿಯಿದೆ. ಭೂದೇವಿಯನ್ನು ತನ್ನ ಕೋರೆಹಲ್ಲುಗಳ ನೆರವಿನೊಂದಿಗೆ ಎತ್ತಿಕೊಂಡಿರುವ ವರಾಹಸ್ವಾಮಿಯ ವಿಗ್ರಹದ ಶಂಖವು ಬಿಳುಪಾಗಿರುವುದರಿಂದ ಅದಕ್ಕೆ ಈ ಹೆಸರಿದೆ. ಇದನ್ನು ಮುಮ್ಮಡಿಕೃಷ್ಣರಾಜ ಒಡೆಯರು ಕಟ್ಟಿಸಿದರು (೧೮೦೯). ಇದು ಶುದ್ಧ ಹೊಯ್ಸಳ ಶೈಲಿಯಲ್ಲಿದೆ. ವರಾಹಮೂರ್ತಿ ಎರಡು ಅಡಿ ಎತ್ತರವಿದ್ದು, ಆಕರ್ಷಕವಾಗಿದೆ. ಮೊದಲು ತಮಿಳುನಾಡಿನ ಶ್ರೀವೈಷ್ಣವ ದೇವಾಲಯವೊಂದರಲ್ಲಿದ್ದ ಈ ವಿಗ್ರಹವನ್ನು ಆ ದೇವಾಲಯ ಅವಸಾನಗೊಂಡ ನಂತರ ತಂದು ಇಲ್ಲಿ ಪ್ರತಿಷ್ಠಾಪಿಸಲಾಯಿತ್ತೆಂದು ಪ್ರತೀತಿ. ಈ ಮೂರ್ತಿಯ ಪಾದದ ಬಳಿ ಶ್ರೀದೇವಿ, ಭೂದೇವಿ, ಕೃಷ್ಣ, ತೀರ್ಥಭೇರಿ ಮುಂತಾದ ವಿಗ್ರಹಗಳಿವೆ. ಈ ದೇವಾಲಯದ ನವರಂಗಮಂಟಪ ಸುಂದರವಾಗಿದ್ದು, ಅಲ್ಲಿ ಶ್ರೀರಾಮಾನುಜಾಚಾರ್ಯ, ಜೀಯರ್, ವಿಷ್ವಕ್ಸೇನ, ನಮ್ಮಾಳ್ವಾರ್, ಗರುಡ, ರಂಗನಾಥ ಹಾಗೂ ಆಂಜನೇಯನ ಮೂರ್ತಿಗಳಿವೆ. ಸೊಗಸಾದ ಕಂಬಗಳಿರುವ ಇದರ ಗೋಪುರಕ್ಕೆ ಐದು ಹಂತಗಳಿದ್ದು, ಎರಡು ಕೋರಂಬ ಹಾಗೂ ಐದು ಚಿನ್ನದ ಕಲಶಗಳಿವೆ.

**ಇತರೇ ದೇವಾಲಯ–ಮಠಗಳು :** ವಂಟಿಕೊಪ್ಪಲಿನ ವೆಂಕಟರಮಣ, ಸಿದ್ಧಾರ್ಥ ಬಡಾವಣೆಯ ವಿನಾಯಕ, ಇಟ್ಟಿಗೆಗೂಡಿನ ಚಾಮುಂಡೇಶ್ವರಿ, ಸತ್ಯನಾರಾಯಣ, ಸಿದ್ಧಾಪ್ಪಾಜಿ ಹಾಗೂ ಎಲ್ಲಮ್ಮದೇವಿ ಗುಡಿಗಳು, ಹೆಬ್ಬಾಳದ ವೆಂಕಟರಮಣ, ವಿದ್ಯಾರಣ್ಯಪುರದ ಕರಿಮಾರಿಯಮ್ಮ, ಶ್ರೀರಾಮಮಂದಿರ, ಅಗ್ರಹಾರದ ೧೦೧ ಗಣಪತಿ ಗುಡಿ. ಅರಮನೆ ಬಳಿಯಿರುವ ಸುತ್ತೂರು ಹಳೆ ಮಠ, ಶಾರದಾ ಮಂದಿರ ಹಾಗೂ ಶಂಕರಮಠ, ಸರಸ್ವತಿಪುರಂನ ಗಂಗಾಧರೇಶ್ವರ, ನಜರ್‌ಬಾದಿನ ದುರ್ಗಾಂಬ, ಉತ್ತನಹಳ್ಳಿ ಮಾರಮ್ಮ ಮುಂತಾದ ಅಸಂಖ್ಯಾತ ಗುಡಿಗಳು ನಗರದಲ್ಲಿವೆ. ಶಾಂತಲಾ ಬಳಿಯ ಶ್ರೀ ರಾಘವೇಂದ್ರಸ್ವಾಮಿ ಮಠ, ಪರಕಾಲಮಠ, ನಂಜನಗೂಡು ರಸ್ತೆಯಲ್ಲಿರುವ ಸುತ್ತೂರು ಮಠ (ಹೊಸ) ಹಾಗೂ ಪಂಚಗವಿ ಮಠವು ಉಲ್ಲೇಖಾರ್ಹವಾಗಿದೆ. ಜೈನ ಬಸದಿಗಳು – ಬನುಮಯ್ಯ ಕಾಲೇಜು ಬಳಿ, ಇಟ್ಟಿಗೆಗೂಡು, ಹಳ್ಳದಕೇರಿ(ಅಪೇರಾ

ಟಾಕೀಸ್ ಹಾಗೂ ಸಂಗಮ ಬಳಿ) ಬಸವೇಶ್ವರ ರಸ್ತೆ, ನೂರಡಿ ರಸ್ತೆ ಮುಂತಾದೆಡೆಗಳಲ್ಲಿವೆ. ನಗರದಲ್ಲಿ ಮಸೀದಿ–ದರ್ಗಾಗಳೂ ಸಾಕಷ್ಟು ಸಂಖ್ಯೆಯಲ್ಲಿವೆ.

**ಮೈಸೂರು ಕರಗ :** ಕಳೆದ ಶತಮಾನದಲ್ಲಿ ಮೈಸೂರು ನಗರದ ಅರಮನೆಯ ಮುಂಭಾಗದ ಕೇರಿಯಾದ ಇಟ್ಟಿಗೆಗೂಡಿನಲ್ಲಿ ೧೯೨೪ರಲ್ಲಿ ಆರಂಭಗೊಂಡ 'ಕರಗೋತ್ಸವ' ಕ್ರಮೇಣ 'ಮೈಸೂರು ಕರಗ' ಎಂದೇ ಖ್ಯಾತಿ ಪಡೆದು ವರ್ಷದಿಂದ ವರ್ಷಕ್ಕೆ ವೈಭವವನ್ನು ವೃದ್ಧಿಸಿಕೊಳ್ಳುತ್ತಾ ಮುಂದುವರಿದುಕೊಂಡು ಬಂದಿದೆ. ಪ್ರತಿವರ್ಷ ವೈಶಾಖ ಮಾಸದಲ್ಲಿ ನಾಲ್ಕು ದಿನಗಳ ಕಾಲ ವಿಜೃಂಭಣೆಯಿಂದ ಇದು ನಡೆಯುತ್ತದೆ. ಮೊದಲ ದಿನ ಮುಂಜಾನೆ ನಾಗಲಕ್ಷ್ಮಿ ದೇವಾಲಯದಿಂದ ಹಾಲಿನ ಕೊಡವನ್ನು ಮೆರವಣಿಗೆಯಲ್ಲಿ ತಂದು ಚಾಮುಂಡೇಶ್ವರಿಗೆ ಹಾಲಿನ ಅಭಿಷೇಕ ಮಾಡುವುದರೊಂದಿಗೆ ಕರಗೋತ್ಸವಕ್ಕೆ ನಾಂದಿ ಹಾಕಲಾಗುತ್ತದೆ. ಅಂದು ರಾತ್ರಿ ಮಾರಮ್ಮನ ಮಣ್ಣಿನ ಕರಗವನ್ನು ತಂದು ಗುಡಿಯನ್ನು ಪ್ರವೇಶಿಸಲಾಗುತ್ತದೆ. ಎರಡನೇ ಹಾಗೂ ಮೂರನೇಯ ದಿನ ಇಟ್ಟಿಗೆಗೂಡಿನ ಬೀದಿ ಬೀದಿಗಳಲ್ಲಿ ದೇವಿಯ ಕರಗವನ್ನು ಮೆರೆಸಿ ನಿವಾಸಿಗಳಿಂದ ಪೂಜೆ ಸ್ವೀಕರಿಸಲಾಗುತ್ತದೆ. ಮೂರನೆಯ ದಿನ ರಾತ್ರಿ ವಿದ್ಯುತ್ದೀಪಾಲಂಕೃತ ಆಕರ್ಷಕ ಮಂಟಪದಲ್ಲಿ ಕರಗ ಹೊತ್ತ ದೇವಕುಮಾರರು ಸಾಗುತ್ತಾರೆ. ಇಟ್ಟಿಗೆಗೂಡಿನಿಂದ ಹೊರಡುವ ಈ ಮೆರವಣಿಗೆಯು ನಗರದ ಟ್ಯಾಂಕ್ ಬಂಡ್ ರಸ್ತೆ, ಅರಮನೆ ರಸ್ತೆ, ನೂರಡಿ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ನಲ್ಲಪ್ಪತಾಣಾ ರಸ್ತೆ, ಶಿವರಾಂಪೇಟೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ, ಕುರುಬಗೇರಿ, ಕುಂಬಾರಗೇರಿ, ನಜರಾಬಾದ್–ಜೂಗಾರ್ಡನ್–ಅಂಗಡಿಬೀದಿ ಮಾರ್ಗವಾಗಿ ಬೆಳಿಗ್ಗೆ ದೇವಾಲಯವನ್ನು ತಲುಪುತ್ತದೆ. ಈ ಮೆರವಣಿಗೆಯಲ್ಲಿ ನಾಡಿನ ವಿವಿಧ ಸಾಂಸ್ಕೃತಿಕ ಕಲಾತಂಡಗಳು, ನಗರದ ವಿವಿಧ ಬಡಾವಣೆಯ ದೇವರ ಪಲ್ಲಕ್ಕಿಗಳು ಭಾಗವಹಿಸುತ್ತವೆ. ನಾಲ್ಕನೆಯ ದಿನ ಮುಂಜಾನೆ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಜೋಡಿ ಕರಗಗಳ ಮೆರವಣಿಗೆ–ಪೂಜೆಗಳು ನಡೆದು, ಅಂದುರಾತ್ರಿ ಮಹಾಮಂಗಳಾರತಿಯೊಂದಿಗೆ ದೇವಿಯರನ್ನು ವಿಧಿವತ್ತಾಗಿ ವಿಸರ್ಜಿಸಲಾಗುತ್ತದೆ. ೨೦೧೦ರಲ್ಲಿ ದಿನಾಂಕ ೧೫–೧೬ನೇ ಏಪ್ರಿಲ್ ರವರೆಗೆ ೮೬ನೇ ಮೈಸೂರು ಕರಗ ಮಹೋತ್ಸವವನ್ನು ಸಡಗರ, ವಿಜೃಂಭಣೆಯೊಡನೆ ಯಶಸ್ವಿಯಾಗಿ ಆಚರಿಸಲಾಯಿತು.

**ಸಂತ ಫಿಲೋಮಿನಾ ಚರ್ಚ್ :** ಪ್ರಸಿದ್ಧ ಪ್ರವಾಸಿತಾಣ ಹಾಗೂ ಪ್ರಮುಖ ಧಾರ್ಮಿಕ ಕೇಂದ್ರವೂ ಆಗಿರುವ ಸಂತ ಫಿಲೋಮಿನ (ರೋಮನ್ ಕ್ಯಾಥೋಲಿಕ್) ಇಗರ್ಜಿಯು ಅರಮನೆಯಿಂದ ಒಂದು ಕಿ.ಮೀ. ದೂರದಲ್ಲಿದೆ(ಕೇಂದ್ರ ಬಸ್ ನಿಲ್ದಾಣಕ್ಕೆ ಸಮೀಪವಾಗಿದೆ). ಮೊದಲು ಇದನ್ನು ಸಂತ ಜೋಸೆಫ್ ಇಗರ್ಜಿ ಎಂದು ಕರೆಯಲಾಗುತ್ತಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ಅಮೃತ ಹಸ್ತದಿಂದ ಇದನ್ನು ೧೯೩೩ರಲ್ಲಿ ಶಿಲಾನ್ಯಾಸಗೊಳಿಸಿ ೧೯೩೮ ರಲ್ಲಿ ಪೂರ್ಣಗೊಳಿಸಲಾಯಿತು. ೧೬೫ ಅಡಿ ಎತ್ತರವಿರುವ ಇದನ್ನು, ಅಮೇರಿಕಾದ (ನ್ಯೂಯಾರ್ಕ್) ಸಂತ ಪ್ಯಾಟ್ರಿಕ್ ಕ್ಯಾಥಡ್ರಲ್ ಹಾಗೂ ಜರ್ಮನಿಯ ಕೊಲೊನ್ನಯ ಗಾಥಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಫ್ರಾನ್ಸ್

ದೇಶದಲ್ಲಿ ತಯಾರಿಸಿದ ಗಾಜಿನ ಮೇಲೆ ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸಿದ ಸನ್ನಿವೇಶವನ್ನುಳ್ಳ ವರ್ಣಚಿತ್ರವಿಲ್ಲಿದೆ. ಚರ್ಚಿನ ನೆಲಮಾಳಿಗೆಯಲ್ಲಿ ಸಂತ ಫಿಲೋಮಿನಾಳ ವಿಗ್ರಹವಿದೆ. ಮೂರನೆಯ ಶತಮಾನದಲ್ಲಿದ್ದ ಈಕೆ, ಗ್ರೀಸ್ ದೇಶದ ಸುಪ್ರಸಿದ್ಧ ಸಂತಳಾಗಿದ್ದು, ಅವಳ ಶವದ ಎಲುಬು ಮತ್ತು ತೊಟ್ಟ ಬಟ್ಟೆಯ ತುಣುಕುಗಳನ್ನು ಸಂರಕ್ಷಿಸಿ ಈ ಚರ್ಚಿನಲ್ಲಿಡಲಾಗಿದೆಯೆಂದು ಹೇಳಲಾಗುತ್ತದೆ.

**ಮೃಗಾಲಯ :** ಚಾಮುಂಡೇಶ್ವರಿ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿರುವ ಚಾಮರಾಜೇಂದ್ರ ಮೃಗಾಲಯ, ಮೈಸೂರು ನಗರದ ಪ್ರಮುಖ ಆಕರ್ಷಣೆಗಳಲ್ಲೊಂದು. ಇದನ್ನು ೧೮೯೨ರಲ್ಲಿ ಸ್ಥಾಪಿಸಲಾಯಿತು. ಅದಕ್ಕೂ ಮುನ್ನ ಇದನ್ನು **'ಖಾಸ್ ಬಂಗಲೆ',** ತಮಾಷೆ ಬಂಗಲೇ ಎಂದೂ ಕರೆಯುತ್ತಿದ್ದರು, ೧೯೨೦ರಲ್ಲಿ ಸಾರ್ವಜನಿಕರಿಗೂ ಪ್ರವೇಶವನ್ನು ಕಲ್ಪಿಸಲಾಯಿತು. ಮೃಗಾಲಯದ ೨೫೦ ಹೆಕ್ಟೇರ್ ಪ್ರದೇಶದಲ್ಲಿ ದೇಶ ವಿದೇಶಗಳಿಂದ ತರಿಸಿದ ಸುಮಾರು ೧೫೦೦ಕ್ಕೂ ಹೆಚ್ಚು ಪ್ರಭೇದಗಳಿಗೆ ಸೇರಿದ ಪ್ರಾಣಿಗಳನ್ನು ಸಾರ್ವಜನಿಕ ವೀಕ್ಷಣೆಗೆ ಇಡಲಾಗಿದೆ. ಅಲ್ಲದೆ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿರುವ **ಪ್ರಾಕೃತಿಕ ಇತಿಹಾಸ ಸಂಗ್ರಹಾಲಯ**ವು ನಗರದ ಸಿದ್ಧಾರ್ಥ ಬಡಾವಣೆಯಲ್ಲಿದ್ದು, ಸಾರ್ವಜನಿಕ ವೀಕ್ಷಣೆಗೆ ಲಭ್ಯವಿದೆ.

**ಕಾರಂಜಿಕೆರೆ :** ಮೈಸೂರಿನ ಹಳೆಯ ಕೆರೆಗಳಲ್ಲಿ ಒಂದಾದ ಇದು ೩೫ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಈ ಮೊದಲು ಇದನ್ನು ದಸರೆಯ ಜಂಬೂಸವಾರಿಗೆ ಆಗಮಿಸುವ ಆನೆ, ಅಶ್ವರೋಹಿದಳದ ಕುದುರೆ ಹಾಗೂ ವಾಹನಗಳನ್ನು ತೊಳೆಯುವುದಕ್ಕೆ ಹಾಗೂ ಸುತ್ತಮುತ್ತಲ ಬಡಾವಣೆಯ ಕಸಕಡ್ಡಿಗಳನ್ನು ತಂದು ರಾಶಿ ಮಾಡುವುದಕ್ಕೆ ಬಳಸಿಕೊಳ್ಳಲಾಗಿತ್ತು. ೩೦ ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆಯಿಂದ ಕೆರೆಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಮೈಸೂರು ಮೃಗಾಲಯ ಪ್ರಾಧಿಕಾರವು ಹಲವಾರು ಹಂತಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಕೆರೆಗೆ ಒಂದು ರೂಪ ನೀಡಲು ಪ್ರಯತ್ನಿಸಿತು. ಚಾಮುಂಡಿಬೆಟ್ಟದಿಂದ ಬರುವ ನೀರನ್ನೇ ಆಶ್ರಯಿಸಿರುವ ಕಾರಂಜಿಕೆರೆಯಲ್ಲಿ ನೀರನ್ನು ಸಂಗ್ರಹಿಸಲು ಸಮರ್ಪಕ ಕಾಲುವೆಯನ್ನು ತೋಡಲಾಯಿತು. ಕೆರೆಯ ಮಧ್ಯದಲ್ಲಿ ಕೃತಕ ದ್ವೀಪವನ್ನು ನಿರ್ಮಿಸಿ ಬಗೆಬಗೆಯ ಹೂವಿನಗಿಡ–ಮರಗಳನ್ನು ಬೆಳೆಸಲಾಗಿದೆ. ೨೦೦೨ರಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನವೀಕರಣ ಮತ್ತು ಅಭಿವೃದ್ಧಿ ಯೋಜನೆಯಡಿಯಲ್ಲಿ ಸುಮಾರು ೧.೧೭ ಕೋಟಿ ರೂಪಾಯಿ ವೆಚ್ಚದಲ್ಲಿ ಕಾರಂಜಿಕೆರೆಯನ್ನು ಅಭಿವೃದ್ಧಿ ಮಾಡಲಾಗಿದೆ. ೨೦೦೪ರಿಂದ 'ಕಾರಂಜಿಕೆರೆ ಪರಿಸರ ಉದ್ಯಾನ' ಎಂಬ ಹೆಸರಿನಲ್ಲಿ ಇದು ಸಾರ್ವಜನಿಕ ವೀಕ್ಷಣೆಗೆ ತೆರೆದುಕೊಂಡಿದ್ದು, ಇಲ್ಲಿಯ 'ದೋಣಿವಿಹಾರ' ವಿಶೇಷ ಆಕರ್ಷಣೆಯಾಗಿದೆ. ಕೆರೆ ೧೨ ಅಡಿ ಆಳವಿದೆ. ಸುಮಾರು ೬೦ ಮೀಟರ್ ಉದ್ದ ಹಾಗೂ ೪೦ ಮೀಟರ್ ಅಗಲದ ಬೃಹತ್ ಪಕ್ಷಿ ಪಂಜರ ಉದ್ಯಾನವನ ಇಲ್ಲಿಯ ಪ್ರಧಾನ ಆಕರ್ಷಣೆ. ಇಲ್ಲಿ ಕಾಡುಕೋಳಿ, ನವಿಲು, ಗ್ರೀನ್ ಫೌಲ್, ಸೇರಿದಂತೆ ೧೫ ಜಾತಿಯ ೫೭ಕ್ಕೂ ಹೆಚ್ಚು ಪ್ರಭೇಧದ ಪಕ್ಷಿಗಳು ಇದ್ದು, ಹತ್ತಿರದಿಂದಲೇ ವೀಕ್ಷಿಸಬಹುದು. ಕೆರೆಯ ಮತ್ತೊಂದು ಮೂಲೆಯಲ್ಲಿ 'ಚಿಟ್ಟೆಯ

ಉದ್ಯಾನವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಇಲ್ಲಿ ಬಣ್ಣದ ಚಿಟ್ಟೆಗಳು ಹೂವಿನ ಮಕರಂದವನ್ನು ಹೀರುತ್ತಾ, ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗುತ್ತವೆ. ಪಾರ್ಕಿನಲ್ಲಿ ಮಾವು, ಹಲಸು, ಸೀಬೆ, ಬೆಟ್ಟದ ನೆಲ್ಲಿ, ಎಲಚಿ, ಗಸಗಸೆ ಸೇರಿದಂತೆ ಸುಮಾರು ಮೂರು ಸಾವಿರ ಮರಗಿಡಗಳಿವೆ. ಪಾರ್ಕಿನಲ್ಲಿ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿದೆ. ಚಿಟ್ಟೆ ಪಾರ್ಕಿನ ತುದಿಯಲ್ಲಿ ದೋಣಿಯನ್ನು ನಿಲುಗಡೆ ಮಾಡಲು ನಿಲ್ದಾಣ ಕಟ್ಟೆಯನ್ನು ನಿರ್ಮಿಸಬೇಕಾಗಿದೆ. ಮುಂದೆ ಅಕ್ವೇರಿಯಂ ನಿರ್ಮಾಣವಾಗಬೇಕಾಗಿದೆ. ಪ್ರಸ್ತುತ ಇದಕ್ಕೂ ಮೃಗಾಲಯಕ್ಕೂ ನಡುವೆ ಇದ್ದ ರಸ್ತೆಯನ್ನು ತೆಗೆದು ಉದ್ಯಾನವನವನ್ನಾಗಿ ಮಾಡಲಾಗುತ್ತಿದೆ.

**ಕುಕ್ಕರಹಳ್ಳಿ ಕೆರೆ :** ಇದು ಒಡೆಯರ್ ಕಾಲದಲ್ಲಿ ನಿರ್ಮಾಣಗೊಂಡಿದ್ದೆಂದು ಪ್ರತೀತಿ. ಆಗಿನ ಕಾಲಕ್ಕೆ ನಿರ್ಮಾಣಗೊಂಡಿದ್ದ ಗಂಧದೆಣ್ಣೆ ಕಾರ್ಖಾನೆಗೆ ಬೇಕಾದ ನೀರನ್ನು ಇಲ್ಲಿಂದಲೇ ಪೂರೈಸಲಾಗುತ್ತಿತ್ತು. ಮೂರ್‍ನಾಲ್ಕು ಕಿಲೋಮೀಟರ್ ಸುತ್ತಳತೆಯುಳ್ಳ ಈ ಕೆರೆಗೆ ಹಿಂದೆ ೧೦ ಮೈಲಿ ದೂರದಿಂದ ಕಾಲುವೆ ಮುಖಾಂತರ ನೀರು ಹರಿದು ಬರುತ್ತಿದ್ದು. ಶುದ್ಧ ಜಲಮೂಲವಿದ್ದು, ಮಳೆಯಾದಾಗ ವರ್ಷದಲ್ಲಿ ಮೂರು ಸಲ ಕೆರೆಕೋಡಿ ಬೀಳುತ್ತಿತ್ತೆಂದು ನಗರದ ಹಿರಿಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಪ್ರತಿನಿತ್ಯ ಕವಿವರ್ಯರಾದ ಕುವೆಂಪು, ತೀ.ನಂ.ಶ್ರೀ, ವೆಂಕಟಣ್ಣಯ್ಯ ಮೊದಲಾದವರು ವಾಯುವಿಹಾರಕ್ಕೆ ಬರುತ್ತಿದ್ದರು. ಸಾವಿರಾರು ಕಲಾಕಾರರಿಗೆ ಇಂದಿಗೂ ಇದು ಸ್ಫೂರ್ತಿಯ ಚಿಲುಮೆಯಾಗಿದೆ.

**ಈರನೆಗೆರೆಯ ವೀರಗಲ್ಲುಗಳು :** ನಗರದ ಈ(ವೀ)ರನಗೆರೆ ಪ್ರದೇಶದ ಮಹದೇವಮ್ಮನ ಗುಡಿ ಪರಿಸರದಲ್ಲಿ ಒಂದೇ ಸ್ಥಳದಲ್ಲಿ ಮೈಸೂರು ಅರಸರ ಕಾಲಕ್ಕೆ ಸೇರಿದ ಸುಮಾರು ೪೦ಕ್ಕೂ ಹೆಚ್ಚು ವೀರಗಲ್ಲುಗಳಿದ್ದು, ಹಿಂದೆ ಅಲ್ಲಿ ನಡೆದಿರಬಹುದಾದ ಕಾಳಗಕ್ಕೆ ಸಾಕ್ಷಿಗಳಾಗಿ ನಿಂತಿವೆ.

**ಮಧುವನ:** ಮೈಸೂರು ರಾಜಕುಟುಂಬದವರ ಸಮಾಧಿಗಳಿರುವ ರುದ್ರಭೂಮಿ. ಇದು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ, ಮೈಸೂರು–ನಂಜನಗೂಡು ರಸ್ತೆಯ ಬದಿಯಲ್ಲಿದ್ದು ಎಂಟು ಎಕರೆಗಳಷ್ಟು ವಿಸ್ತಾರವಾಗಿದೆ. ಇದು ಪ್ರೇಕ್ಷಕರಿಗೆ ಶ್ಮಶಾನ ಎನ್ನಿಸದೆ, ವೈಭವದ ಮಂಟಪ ಹಾಗೂ ಬೃಂದಾವನಗಳಿಂದ ಕೂಡಿರುವ ಅಪೂರ್ವ ನೆಲೆಯಾಗಿದೆ. ಇಲ್ಲಿ ಒಂಭತ್ತನೆಯ ಚಾಮರಾಜ ಒಡೆಯರಾದಿಯಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಯುವರಾಜ ಕಂಠೀರವ ನರಸರಾಜ ಒಡೆಯರು, ಜಯಚಾಮರಾಜ ಒಡೆಯರು ಮುಂತಾದ ಮಹಾರಾಜರ ಸಮಾಧಿಗಳೇ ಅಲ್ಲದೆ ಮಹಾರಾಣಿಯವರಾದ ರಮವಿಲಾಸ ಸನ್ನಿಧಾನ, ಸೀತಾವಿಲಾಸ ಸನ್ನಿಧಾನ, ವಾಣೀವಿಲಾಸ ಸನ್ನಿಧಾನ; ರಾಜಕುಮಾರಿಯರಾದ ಚೆಲುವಾಜಮ್ಮಣ್ಣಿ, ಕೆಂಪನಂಜಮ್ಮಣ್ಣಿ, ಕೃಷ್ಣಾಜಮ್ಮಣ್ಣಿ, ದೇವಾಜಮ್ಮಣ್ಣಿ ಮತ್ತು ರಾಜಮನೆತನದವರ ರಕ್ತ ಸಂಬಂಧಿಗಳ ಸಮಾಧಿಗಳ ಸಾಲುಗಳಿವೆ. ಅಲ್ಲೇ ಮಹಿಷಾಸುರನ ಗಾರೆ ಮೂರ್ತಿಯೂ ಇದೆ.

**ಉದ್ಯಾನವನ ಹಾಗೂ ವೃತ್ತಗಳು :** ಮೈಸೂರು ನಗರದ ಸೌಂದರ್ಯವನ್ನು, ವಿಶಾಲವಾದ ರಸ್ತೆಗಳು, ರಸ್ತೆಯ ನಡುನಡುವೆ ಇರುವ ಆಕರ್ಷಕ ವೃತ್ತಗಳು, ಇಕ್ಕೆಲದಲ್ಲಿ ಕಾಣಸಿಗುವ ಉದ್ಯಾನಗಳು, ನೂರ್ಮಡಿಗೊಳಿಸಿವೆ. ನಗರದ ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸೆ, ಇರ್ವಿನ್ ರಸ್ತೆ, ದೊಡ್ಡಪೇಟೆ, ನೂರಡಿ ರಸ್ತೆ ಪಟ್ಟಣ ಪ್ರಮುಖ ವಾಣಿಜ್ಯ ಚಟುವಟಿಕೆಯ ತಾಣಗಳಾಗಿವೆ. ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಹಾರ್ಡಿಂಗ್ ವೃತ್ತ (ಆರ್ಗೆಂಟ್) ಸಿಟಿ ಮಾರ್ಕೆಟ್ ಬಳಿಯಿರುವ ಕೃಷ್ಣರಾಜವೃತ್ತ, ಕೋಟೆ ಆಂಜನೇಯಗುಡಿ ಬಳಿಯಿರುವ ಚಾಮರಾಜವೃತ್ತ, ನಗರದ ಆಕರ್ಷಕ ವೃತ್ತಗಳಾಗಿವೆ. ನಗರದ ಕರ್ಜನ್ ಪಾರ್ಕ್, ಸಿಂಹನ್ ಪಾರ್ಕ್, ಕುಪ್ಪಣನಕೊಳ, ಸ್ವಾತಂತ್ರ್ಯಯೋಧರ ಉದ್ಯಾನ ಮುಂತಾದವು ಉಲ್ಲೇಖಾರ್ಹವಾಗಿವೆ.

**ಕೇಂದ್ರೀಯ ಆಹಾರ ಸಂಶೋಧನಾಲಯ :** ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ಅಂಗವಾಗಿ ೧೯೫೦ರ ಅಕ್ಟೋಬರಿನಲ್ಲಿ ಮೈಸೂರು ನಗರದ ರಾಜಕುಮಾರಿ ಚೆಲುವಾಂಬ ಅರಮನೆಯ ವಿಶಾಲ ಮೈದಾನದಲ್ಲಿ ಆಹಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳನ್ನು ಕೈಗೊಳ್ಳಲು ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆಹಾರ ಉತ್ಪಾದನೆ ಹಂತದಿಂದ ಆಹಾರ ಸೇವಿಸುವವರೆಗಿನ ವಿವಿಧ ಮಟ್ಟಗಳಲ್ಲಿ ಆಹಾರವನ್ನು ಸಂರಕ್ಷಿಸಿ ಲಾಭದಾಯಕವಾಗಿ ಬಳಸುವ ವಿಧಾನಗಳಲ್ಲಿ ಸಂಶೋಧನೆ ನಡೆಸಿ ರಾಷ್ಟ್ರದ ಆಹಾರ ಸಮಸ್ಯೆಗೆ ಪರಿಹಾರ ದೊರಕಿಸುವ ಕಾರ್ಯದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿರುವ ಈ ಸಂಸ್ಥೆ ಸುವರ್ಣ ಮಹೋತ್ಸವವನ್ನು ೨೦೦೦ದಲ್ಲಿ ಆಚರಿಸಿದೆ. ಹಣ್ಣು ಹಾಗೂ ತರಕಾರಿಗಳ ಸಂರಕ್ಷಣೆ, ಎಣ್ಣೆ ಹಿಂಡಿಯಿಂದ ಪೌಷ್ಟಿಕಾಂಶಗಳ ತಯಾರಿಕೆ, ಸದ್ಯ ಬಳಕೆಯಲ್ಲಿರುವ ಆಹಾರ ಸಾಮಗ್ರಿಗಳಿಂದ ನೂತನ ಆಹಾರವಸ್ತುಗಳನ್ನು ತಯಾರಿಸಿ ಬಳಸುವ ವಿಧಾನಗಳ ಸಂಶೋಧನೆ, ಆಹಾರ ತಯಾರಿಕೆ ಉದ್ಯಮಗಳಿಗೆ ತಾಂತ್ರಿಕ ನೆರವು ನೀಡುವುದು, ಆಹಾರೋದ್ಯಮದ ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸುವುದು, ಸಿದ್ಧ ಆಹಾರವಸ್ತುಗಳ ಗುಣಮಟ್ಟದ ನಿಯಂತ್ರಣಗಳಂತಹ ಸಾರ್ಥಕ ಸೇವೆಯನ್ನು ನೀಡುವ ಮೂಲಕ ರಾಷ್ಟ್ರದ ಆಹಾರ ಕ್ಷೇತ್ರದ ಅನೇಕ ಜಟಿಲ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಇದು ಕೈಜೋಡಿಸಿದೆ.

**ರಾಜರ ಪ್ರತಿಮೆಗಳು:** ಚಾಮರಾಜೇಂದ್ರ ಒಡೆಯರ ವೈಭವಯುತ ಗಾಂಭೀರ್ಯದ ಅಮೃತಶಿಲೆಯ ಪ್ರತಿಮೆಯನ್ನು ಆಲ್ಬರ್ಟ್ ವಿಕ್ಟರ್ ರಸ್ತೆ ಹಾಗೂ ಅಶೋಕ ರಸ್ತೆ ಸೇರುವ ಅರಮನೆಯ ಉತ್ತರ ದ್ವಾರದ ಚಾಮರಾಜೇಂದ್ರ ಚೌಕದಲ್ಲಿ ಪ್ರತಿಷ್ಠಾಪಿಸಲಾಗಿದೆ. ನಾಲ್ಕು ಕಡೆಗಳಲ್ಲಿಯೂ ಸುಂದರವಾದ ಕೈಪಿಡಿ ಗೋಡೆಗಳನ್ನು ಕಟ್ಟಲಾಗಿದೆ. ಹಿಂಬದಿಯಲ್ಲಿ ಉದ್ಯಾನವನಗಳಿವೆ. ಕಂಬಗಳ ಮೇಲ್ಭಾಗದಲ್ಲಿ ಸುತ್ತಲೂ ಹೂವಿನ ಸರವನ್ನು ಕೊಯ್ದು ನಿರ್ಮಿಸಿರುವ ವೈಖರಿ ನಯನಮನೋಹರವಾಗಿದೆ. ಚಿನ್ನದ ಲೇಪನ ಮಾಡಿರುವ ಗುಮ್ಮಟ ಸದಾ ಪ್ರಕಾಶಿಸುತ್ತಾ ರಾರಾಜಿಸುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ ಅಮೃತಶಿಲಾ ಪ್ರತಿಮೆಯನ್ನು ನಗರದ ಹೃದಯ ಭಾಗವಾದ ಮಾರುಕಟ್ಟೆ ಬಳಿಯ ಕೃಷ್ಣರಾಜಚೌಕದ ಮಧ್ಯೆ ನಿರ್ಮಿಸಲಾಗಿದೆ. ಆರು ದಿಸೆಯಲ್ಲಿ ನಯವಾದ ಕಲ್ಲಿನಲ್ಲಿ ನಿರ್ಮಿಸಿದ

ಮೆಟ್ಟಿಲುಗಳಿವೆ. ಪ್ರತಿಮೆಯ ಸುತ್ತಲೂ ಕಂಬಗಳಿಂದ ಕೂಡಿದ ಮೇಲ್ಭಾಗದಲ್ಲಿನ ಗುಮ್ಮಟವು ಕೆಂಪು ಶಿಲೆಯಿಂದ ಅಲಂಕರಿಸಲ್ಪಟ್ಟಿದೆ. ಇದನ್ನು ಸರ್. ಎಂ. ವಿಶ್ವೇಶ್ವರಯ್ಯನವರು ೧೯೫೨, ಅಕ್ಟೋಬರ್ ೧೬ ರಂದು ಉದ್ಘಾಟಿಸಿದರು. ಈ ಪ್ರತಿಮೆಯ ಶಿಲ್ಪಿ ಆರ್.ಪಿ. ಕಾಮತ್. ಮಹಾತ್ಮ ಗಾಂಧೀಜಿ ಮೈಸೂರಿಗೆ ಭೇಟಿ ನೀಡಿದ್ದನ್ನು ನೆನಪಿಸುವ ಗಾಂಧೀ ಪ್ರತಿಮೆಯು ಗಾಂಧೀಚೌಕದಲ್ಲಿದೆ.

**ಚಿಕ್ಕಗಡಿಯಾರ:** ದೇವರಾಜ ಮಾರುಕಟ್ಟೆಯ ದಕ್ಷಿಣ ದ್ವಾರದ ಎದುರಿನ ಚೌಕದಲ್ಲಿ ಫ್ರೆಂಚ್ ಶಿಲ್ಪ ಕಲಾಶೈಲಿಯಲ್ಲಿ ಇದನ್ನು ಕಟ್ಟಲಾಗಿದೆ. ನಾಲ್ಕು ಕಡೆಗೂ ನಿಲ್ಲಿಸಿರುವ ಕಂಬಗಳ ಮೇಲ್ಭಾಗವು ಹಂತ ಹಂತವಾಗಿದ್ದು ಗೋಪುರ ಆಕರ್ಷಣೀಯವಾಗಿದೆ. ಕಂಬಗಳ ಮಧ್ಯೆ ಸುಂದರವಾದ ಜಲಯಂತ್ರವಿದ್ದು, ಕೆಳಭಾಗದಲ್ಲಿ ಸುತ್ತಲೂ ಕನ್ನಡ, ಇಂಗ್ಲೀಷ್, ಉರ್ದು ಹಾಗೂ ಸಂಸ್ಕೃತದ ಶಿಲಾಲೇಖಗಳಿವೆ. ಮೈಸೂರಿಗೆ ಬ್ರಿಟಿಷ್ ವೈಸರಾಯ್ ಹಾಗೂ ಗೌರ್ನರ್ ಜನರಲ್ ಲಾರ್ಡ್ ಡೆಫರಿನ್ ಭೇಟಿ ನೀಡಿದ ನೆನಪಿಗಾಗಿ ಅಂದಿನ ಮಹಾರಾಜರು ೧೮೮೬ ಡಿಸೆಂಬರ್ ಒಂದರಂದು ಇದನ್ನು ಸ್ಥಾಪಿಸಿದರು.

**ದೊಡ್ಡ ಗಡಿಯಾರ:** ನಗರದ ರಂಗಾಚಾರ್ಲು ಪುರಭವನದ ಮುಂಭಾಗದ ಚೌಕದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಅಳ್ವಿಕೆಯ ರಜತ ಮಹೋತ್ಸವದ ಜ್ಞಾಪಕಾರ್ಥವಾಗಿ ೧೯೨೭ರ ಆಗಸ್ಟ್ ಎಂಟರಂದು ಇದನ್ನು ನಿರ್ಮಿಸಲಾಯಿತು. ಈ ಗಡಿಯಾರ ಗೋಪುರ ಸುಮಾರು ೧೦೦ ಅಡಿ ಎತ್ತರವಿದ್ದು, ಸುಂದರ ಗೋಪುರದ ಮಧ್ಯದಲ್ಲಿರುವ ದೊಡ್ಡ ಗಂಟೆಯನ್ನು ರೋಮ್ ನಗರದಿಂದ ತರಿಸಿಕೊಂಡದ್ದೆಂದು ತಿಳಿಯಲಾಗಿದೆ. ರಾತ್ರಿ ಸಮಯದಲ್ಲಿ ಗಂಟೆಯ ಶಬ್ದ ೨೧/೨ ಕಿ.ಮೀ. ದೂರಕ್ಕೂ ಕೇಳುತ್ತದೆ. ಇತ್ತೀಚೆಗೆ ಈ ಗಡಿಯಾರಕ್ಕೆ ಕನ್ನಡ ಅಂಕಿಗಳನ್ನು ಅಳವಡಿಸಲಾಗಿದೆ. ಅಗ್ರಹಾರದ ಪದ್ಮಾಸ್ಟೋರ್ ವೃತ್ತದ ಬಳಿಯಿರುವ ಚಿಕ್ಕಮಾರುಕಟ್ಟೆಯ ಪ್ರಧಾನ ದ್ವಾರಕ್ಕೆ ಇದ್ದ ಗಡಿಯಾರ ಗೋಪುರವು ದುರಸ್ತಿ ಸಂದರ್ಭದಲ್ಲಿ ಕಣ್ಮರೆಯಾಯಿತು.

**ರೇಸ್‌ಕೋರ್ಸ್ :** ಚಾಮುಂಡಿಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಮೃಗಾಲಯದ ಸಮೀಪವಿರುವ ಮೈಸೂರು ರೇಸ್‌ಕೋರ್ಸ್ ನಾಡಿನ ಗಣ್ಯ ಕುದುರೆ ಜೂಜಿನ ಕೇಂದ್ರಗಳಲ್ಲಿ ಒಂದಾಗಿದ್ದು, ಸೀಸನಲ್ ರೇಸಿಂಗ್ ಜೊತೆಗೆ ಹೈದರಾಬಾದ್, ಕಲ್ಕತ್ತಾ, ಮುಂಬಯಿ, ಚೆನ್ನೈ, ಪೂನಾ, ಊಟಿ, ಡೆಲ್ಲಿ ಮುಂತಾದ ಕೇಂದ್ರಗಳಲ್ಲಿ ಜರುಗುವ ಸೀಸನಲ್ ರೇಸಿಂಗ್ ವೇಳೆಯಲ್ಲಿ ಆಫ್ ಕೋರ್ಸ್ ಬೆಟ್ಟಿಂಗ್ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಇದರಿಂದಾಗಿ ಸ್ವಲ್ಪ ಹೆಚ್ಚು ಕಡಿಮೆ ವರ್ಷದುದ್ದಕ್ಕೂ ರೇಸ್ ಕೋರ್ಸ್ ಚುರುಕಿನಿಂದ ಕೂಡಿರುತ್ತದೆ.

**ವಸ್ತು ಸಂಗ್ರಹಾಲಯಗಳು :** ಮೈಸೂರು ನಗರವು ಅನೇಕ ಸಂಗ್ರಹಾಲಯಗಳ ತಾಣವಾಗಿದೆ. ಮೈಸೂರು ಅರಮನೆಯೇ ಒಂದು ವಸ್ತು ಸಂಗ್ರಹಾಲಯದಂತಿದ್ದು, ಸಾರ್ವಜನಿಕರ ವೀಕ್ಷಣೆಗೆ ವರ್ಷದುದ್ದಕ್ಕೂ ನಿರಂತರವಾಗಿ ತೆರೆದಿರುತ್ತದೆ. ಅರಮನೆಯ ಹಿಂಬದಿಯಲ್ಲಿ

ಮೈಸೂರು ರಾಜವಂಶಸ್ಥರಿಗೆ ಸೇರಿದ ಪ್ರಿನ್ಸ್ ಮ್ಯೂಸಿಯಂ ಇದೆ. ನಗರದ ಲ್ಯಾಂಡ್‌ಸ್ಟೋನ್ ಬಿಲ್ಡಿಂಗ್ ಹಿಂಬದಿಯಲ್ಲಿರುವ ಜಗನ್ಮೋಹನ ಆರ್ಟ್ ಗ್ಯಾಲರಿ ನಗರದ ಮತ್ತೊಂದು ಆಕರ್ಷಕ ವಸ್ತುಸಂಗ್ರಹಾಲಯವಾಗಿದೆ. ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿಯಿರುವ ವೆಲ್ಲಿಂಗ್‌ಟನ್ ಕಟ್ಟಡದಲ್ಲಿ, ರಾಜ್ಯ ಸರ್ಕಾರದ ಪ್ರಾಚ್ಯ ವಸ್ತು ಸಂಗ್ರಹಾಲಯ ಹಾಗೂ ಕೇಂದ್ರ ಸರ್ಕಾರದ ವಸ್ತು ಸಂಗ್ರಹಾಲಯಗಳಿವೆ. ನಗರದ ಕೇಂದ್ರ ರೈಲು ನಿಲ್ದಾಣದ ಬದಿಗಿರುವ ರೈಲು ವಸ್ತು ಸಂಗ್ರಹಾಲಯ, ಮಾನಸ ಗಂಗೋತ್ರಿಯ ಜಾನಪದ ಸಂಗ್ರಹಾಲಯ, ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ಇಲಾಖೆಯ ಪ್ರಾಚ್ಯ ವಸ್ತುಸಂಗ್ರಹಾಲಯ ಮುಂತಾದವು ಉಲ್ಲೇಖಾರ್ಹವಾಗಿವೆ.

**ಇತರೆ ಆಕರ್ಷಣೆಗಳು :** ಮೈಸೂರಿನ ಅಠಾರ ಕಛೇರಿ (ಜಿಲ್ಲಾಧಿಕಾರಿಗಳ ಕಛೇರಿ), ಅದರ ಬಳಿಯಿರುವ ಜೇಮ್ಸ್ ಡೇವಿಡ್‌ಸನ್ ಗಾರ್ಡನ್ ಪ್ರತಿಮೆ, ಮೈಸೂರು ವಿಶ್ವವಿದ್ಯಾಲಯ, ದಸರಾ ವಸ್ತು ಪ್ರದರ್ಶನಾಲಯ, ಶ್ರೀರಾಮಕೃಷ್ಣಾಶ್ರಮ, ರಂಗಾಚಾರ್ಲು ಪುರಭವನ, ಕಲಾಮಂದಿರ, ಮಾನಸ ಗಂಗೋತ್ರಿ, ಕಾವಾ, ಗೌರ್‍ನಮೆಂಟ್ ಗೆಸ್ಟ್‌ಹೌಸ್, ನ್ಯಾಯಾಲಯ ಕಟ್ಟಡ, ದೇವರಾಜ ಮಾರುಕಟ್ಟೆ, ಕೃಷ್ಣರಾಜೇಂದ್ರ ಆಸ್ಪತ್ರೆ, ಶಿವರಾತ್ರೇಶ್ವರ ಮಠ, ಮಧುವನ, ಗಣಪತಿ ಸಚ್ಚಿದಾನಂದ ಆಶ್ರಮವಿರುವ ಅವಧೂತ ಪೀಠ, ಮೈಸೂರು ವಿಶ್ವವಿದ್ಯಾಲಯ, ಕ್ರಾಫರ್ಡ್‌ಭವನ, ಮಹಾರಾಣಿ, ಮಹಾರಾಜ ಹಾಗೂ ಯುವರಾಜ ಕಾಲೇಜುಗಳು, ಚಾಮುಂಡಿ ವಿಹಾರ–ಕ್ರೀಡಾಂಗಣ, ದೊಡ್ಡಕೆರೆ ಮೈದಾನ, ರೈಲು ನಿಲ್ದಾಣ, ರೈಲ್ವೆ ವಸ್ತು ಸಂಗ್ರಹಾಲಯ, ನ್ಯೂ ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಮುಂತಾದವು ನಗರದ ಪ್ರೇಕ್ಷಣೀಯ ಹಾಗೂ ವ್ಯಾಪಾರಿ ಸ್ಥಳಗಳಾಗಿವೆ. ಕೆ.ಆರ್.ಎಸ್. ರಸ್ತೆಯಲ್ಲಿ ಸ್ವಲ್ಪ ಒಳಕ್ಕಾದಂತೆ ಇರುವ **ಜಿ.ಆರ್.ಎಸ್.ಫ್ಯಾಂಟಸ್ಸಿ ಪಾರ್ಕ್** ನಗರದ ಆಕರ್ಷಣೆಗೆ ಮತ್ತೊಂದು ಸೇರ್ಪಡೆಯಾಗಿದೆ. ಒಟ್ಟಾರೆ ಮೈಸೂರು ನಗರ ಅಂತರಾಷ್ಟ್ರೀಯ ಮಟ್ಟದ ಪ್ರೇಕ್ಷಣೀಯ ನಗರಗಳಲ್ಲೊಂದಾಗಿದೆ.

**ಚಾಮುಂಡಿ ಬೆಟ್ಟ :** ಮೈಸೂರು ನಗರದಿಂದ ೧೨ ಕಿ.ಮೀ. ಆಗ್ನೇಯಕ್ಕೆ ಪೂರ್ವ–ಪಶ್ಚಿಮವಾಗಿ ಹಬ್ಬಿದಂತಿರುವ ಇದು ಸಮುದ್ರಮಟ್ಟದಿಂದ ೧೦೬೩ ಮೀಟರ್ ಎತ್ತರದಲ್ಲಿದೆ. ಬೆಟ್ಟದ ಮೇಲೆ ಚಾಮುಂಡೇಶ್ವರಿಯ ದೇವಾಲಯವಿರುವುದರಿಂದ ಈ ಬೆಟ್ಟವನ್ನು ಆ ದೇವತೆಯ ಹೆಸರಿನಿಂದಲೇ ಕರೆಯಲಾಗಿದೆ. ಸುತ್ತಲೂ ಮೈದಾನವಿದ್ದು, ಒಂಟಿಯಾಗಿ ನಿಂತಿರುವ ಕಡಿದಾದ ಈ ಬೆಟ್ಟ ಬಹುದೂರದವರೆಗೂ ಗೋಚರಿಸುವುದಲ್ಲದೆ, ಬೆಟ್ಟದ ಮೇಲೆ ನಿಂತು ನೋಡಿದಾಗ ಮೈಸೂರಿನ ಹರವು ಹಾಗೂ ಸುತ್ತಲಿನ ಪ್ರಕೃತಿ ಸೌಂದರ್ಯ ರಮ್ಯವಾಗಿ ಕಾಣಿಸುತ್ತದೆ. ಬೆಟ್ಟದ ಮೇಲ್ಭಾಗವನ್ನು ಹತ್ತನೆಯ ಶತಮಾನದ ಹೊತ್ತಿಗಾಗಲೇ ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿದ್ದು, ಶಾಸನಗಳು ಇದನ್ನು ಮಚ್ಚಿಲದ ತೀರ್ಥ ಅಥವಾ ಮರ್ಬ್ಬಳದ ತೀರ್ಥ ಎಂದು ಕರೆದಿವೆ. ಪುರಾಣದಲ್ಲೂ ಇದನ್ನು 'ಮಹಾಬಲತೀರ್ಥ' ಎಂದೇ ಕರೆಯಲಾಗಿದೆ. ಈಗ ಇಲ್ಲಿರುವ ಮಹಾಬಲೇಶ್ವರ ದೇವಸ್ಥಾನ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕಿಂತ ಮುಂಚೆಯೇ ನಿರ್ಮಿತವಾಗಿತ್ತು. ವಿಷ್ಣುವರ್ಧನನ ಕಾಲದಲ್ಲಿ ಈ ಮರ್ಬ್ಬಳದ ತೀರ್ಥಕ್ಕೆ ಯಾದವಪುರದಲ್ಲಿದ್ದ ವಿಷ್ಣುವರ್ಧನನ

ಅಧಿಕಾರಿಯೊಬ್ಬ ದತ್ತಿ ಬಿಟ್ಟಿದ ಬಗ್ಗೆ ೧೧೨೮ರ ಶಾಸನವಿದೆ. ಆದರೆ ಅದರ ಮುಂದಿನ ಮಂಟಪವನ್ನು ೧೭ನೆ ಶತಮಾನದಲ್ಲಿ ಕಟ್ಟಿಸಿದುದಾಗಿ ಅಲ್ಲಿಯ ಕಂಬಗಳ ಮೇಲಿನ ಶಾಸನಗಳಿಂದ ತಿಳಿದು ಬರುತ್ತದೆ. ಮೈಸೂರರಸರು ಬೆಟ್ಟದ ಮೇಲಿದ್ದ ಮಹಿಷಾಸುರ ಮರ್ದಿನಿಯನ್ನು ಚಾಮುಂಡೇಶ್ವರಿ ಎಂಬ ಹೆಸರಿನಿಂದ ತಮ್ಮ ಮನೆ ದೇವರಾಗಿ ಸ್ವೀಕರಿಸದ ಮೇಲೆ ಮಬ್ಬಳ ತೀರ್ಥಕ್ಕೆ ಚಾಮುಂಡಿಬೆಟ್ಟ ಎಂಬ ಹೆಸರು ಬಂದಿರಬೇಕು. ಬೆಟ್ಟದಲ್ಲಿ ಚಾಮುಂಡೇಶ್ವರಿಯನ್ನು ಪ್ರತಿಷ್ಠಾಪಿಸಲಾಗಿದೆ. ಚಂಡ, ಮುಂಡ ಎಂಬ ರಾಕ್ಷಸರನ್ನು ಸಂಹರಿಸಿದ್ದಕ್ಕಾಗಿ ದುರ್ಗಾದೇವಿಗೆ ಚಾಮುಂಡೇಶ್ವರಿ ಎಂಬ ಹೆಸರು ಬಂದಿದೆ ಎಂದು ಪ್ರತೀತಿ. ಆನಂತರ ಅಲ್ಲಿದ್ದ ದೇವಿಯ ಆಲಯಕ್ಕೆ ಪ್ರಾಮುಖ್ಯತೆ ಹೆಚ್ಚಿ ದೇವಾಲಯ ವಿಸ್ತಾರವಾಗುತ್ತ ಹೋಯಿತು. ದೊಡ್ಡದೇವರಾಜ ಒಡೆಯರು ಬೆಟ್ಟಕ್ಕೆ ಸಾವಿರ ಮೆಟ್ಟಿಲುಗಳನ್ನು ಕಟ್ಟಿಸಿದರಲ್ಲದೆ ಬೆಟ್ಟದ ನಡುವೆ ೭೦೦ನೆಯ ಮೆಟ್ಟಿಲಿನ ಹತ್ತಿರದ ಬಂಡೆಗಲ್ಲೊಂದರಲ್ಲಿ ೨೫ ಅಡಿ ಉದ್ದ, ೧೬ ಅಡಿ ಎತ್ತರದ ಬೃಹದಾಕಾರದ ನಂದಿಯನ್ನು ಕಡೆಸಿ ಪ್ರತಿಷ್ಠೆ ಮಾಡಿಸಿದರು. ಚಾಮುಂಡೇಶ್ವರಿ ದರ್ಶನದ ನಂತರ ಬೆಟ್ಟ ಇಳಿಯುವಾಗ ನಂದಿ ದರ್ಶನ ಪಡೆಯಬಹುದು. ಗಂಟೇಸರ, ಗೆಜ್ಜೆಸರ, ಗವುಸುಗಳಿಂದ ಅಲಂಕೃತವಾಗಿದ್ದು, ಸಹಜ ಮುಖಲಕ್ಷಣಗಳಿಂದ ಕೂಡಿರುವ ಈ ನಂದಿ ಅತ್ಯಂತ ಆಕರ್ಷಣೀಯವಾಗಿದೆ.

ಚಾಮುಂಡೇಶ್ವರಿ ಗುಡಿಯು ದ್ರಾವಿಡ ಶೈಲಿಯಲ್ಲಿರುವ ವಿಶಾಲವಾದ ದೇವಾಲಯ. ಮೂಲ ದೇವಾಲಯದ ನಿರ್ಮಾಣ ಕಾಲವನ್ನು ತಿಳಿಯಲು ಆಧಾರಗಳಿಲ್ಲ. ಮೈಸೂರು ಒಡೆಯರ ಕಾಲದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಇದನ್ನು ನವೀಕರಿಸಿ ಅದರ ಮಹಾದ್ವಾರಕ್ಕೆ ಸುಂದರವಾದ ಗೋಪುರವನ್ನು ಕಟ್ಟಿಸಿದ್ದು, (೧೮೨೫–೧೮೨೬) ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತವರ ಪತ್ನಿಯರಾದ ದೇವಾಜಮ್ಮಣ್ಣಿ, ಚೆಲುವಾಜಮ್ಮಣ್ಣಿ ಮತ್ತು ಲಿಂಗಾಜಮ್ಮಣ್ಣಿಯ ಭಕ್ತ ವಿಗ್ರಹಗಳು ಈ ದೇವಾಲಯದಲ್ಲೂ ಇದ್ದು, ಪೀಠದ ಮೇಲೆ ಅವರವರ ಹೆಸರುಗಳಿವೆ. ಸುಕನಾಸಿ ಮತ್ತು ನವರಂಗಗಳಿಗೆ ಹಾಕಿಸಿರುವ ಹಿತ್ತಾಳೆ ತಗಡು, ಸಿಂಹವಾಹನವೇ ಮೊದಲಾದ ಹಲವು ಉತ್ಸವ ವಾಹನ, ದೇವಿಯ ಸ್ತೋತ್ರಗಳನ್ನೊಳಗೊಂಡ ನಕ್ಷತ್ರ ಮಾಲಿಕೆ, ಆಭರಣಗಳೇ ಮುಂತಾದವು ದೇವಾಲಯಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ರಾಜ ಮನೆತನದ ಇತರರು ಮಾಡಿಸಿರುವ ಸೇವೆಗಳು. ಪ್ರತಿವರ್ಷ ಇಲ್ಲಿ ಜಾತ್ರೆ, ತೆಪ್ಪೋತ್ಸವ ಜರುಗುತ್ತದೆ. ಪ್ರತಿದಿನ ೮೧೦ ಸಾವಿರ ಭಕ್ತರು, ಪ್ರವಾಸಿಗರು ಇಲ್ಲಿಗೆ ಆಗಮಿಸುವರು. ದಸರಾ ಉತ್ಸವ ಸಮಯದಲ್ಲಿ ರಥೋತ್ಸವ ಮತ್ತು ತೆಪ್ಪೋತ್ಸವ ನಡೆಯುತ್ತದೆ. ಪ್ರತಿದಿನ ಪೂಜೆ ಹಾಗೂ ಮಂಗಳವಾರ – ಶುಕ್ರವಾರಗಳಂದು ವಿಶೇಷ ಪೂಜೆ ಇರುತ್ತದೆ. ದೇವಸ್ಥಾನದ ಕಳಸಕ್ಕೆ ಪ್ರತಿದಿನ ಬೆಳಿಗ್ಗೆ ೬ ರಿಂದ ೭.೩೦ ಹಾಗೂ ಸಂಜೆ ೬ ರಿಂದ ೭.೩೦ವರೆಗೆ ಅಭಿಷೇಕ ನಡೆಯುತ್ತದೆ. ಚಾಮುಂಡೇಶ್ವರಿಗೆ ೨೫ಕ್ಕೂ ಹೆಚ್ಚು ವಿಧದ ಸೇವೆ ಸಲ್ಲಿಸಬಹುದು. ಬೆಳ್ಳಿ ರಥೋತ್ಸವ, ಶತಚಂಡಿ ಹೋಮ, ನವಚಂಡಿಹೋಮಗಳಿಗೆ ೧೫೦೦ ರೂ. ದರ ನಿಗದಿಪಡಿಸಲಾಗಿದೆ. ಮೈಸೂರು ನಗರ

ಬಸ್ ನಿಲ್ದಾಣದಿಂದ ಪ್ರಾಣಿ ಸಂಗ್ರಹಾಲಯ ಮಾರ್ಗವಾಗಿ ಚಾಮುಂಡಿಬೆಟ್ಟಕ್ಕೆ ನಿರಂತರ ನಗರ ಸಾರಿಗೆ ಬಸ್ಸು ಸೌಲಭ್ಯವಿದೆ.

ಪ್ರವಾಸಿಗರಿಗೆ ಇಲ್ಲಿಯ ಮತ್ತೊಂದು ಆಕರ್ಷಣೆ ಎಂದರೆ ಬೆಟ್ಟದ ಮೇಲಿನ ಬಸ್‌ಸ್ಟಾಂಡ್ ಬಳಿಯಿರುವ ೧೨ ಅಡಿ ಎತ್ತರದ ಮಹಿಷಾಸುರನ ಗಾರೆ ವಿಗ್ರಹ. ಇದೇ ಬಗೆಯ ಇನ್ನೊಂದು ಗಾರೆ ಶಿಲ್ಪವು ನಗರದ ನಂಜನಗೂಡು ರಸ್ತೆಯಲ್ಲಿರುವ ಅರಸರಿಗೆ ಸೇರಿದ ಮಧುವನದಲ್ಲಿದೆ. ದೇವಾಸ್ಥಾನದ ಎದುರಿಗೆ ತಗ್ಗಲ್ಲಿ ಸಣ್ಣ ಊರೊಂದು ಬೆಳೆದಿದ್ದು, ಅವಶ್ಯಕವಾದ ಅಂಗಡಿ ಮುಗ್ಗಟ್ಟುಗಳೂ ಇವೆ. ಬೆಟ್ಟದ ಪೂರ್ವತುದಿಯ ತಪ್ಪಲಿನಲ್ಲಿ ಅದಕ್ಕೆ ಸೇರಿದಂತೆಯೇ, ಲಲಿತಾದ್ರಿ ಎಂಬ ತಗ್ಗಾದ ಮೊರಡಿಯಿದೆ. ಪ್ರಶಾಂತ ವಾತಾವರಣದಿಂದ ಕೂಡಿರುವ ಈ ಎಡೆಯಲ್ಲಿ ಸುತ್ತಲೂ ಗಿಡಮರಗಳಿಂದಾವೃತವಾದ ಲಲಿತ ಮಹಲ್ ವಸತಿ ಗೃಹವಿದೆ. ಬೆಟ್ಟದ ಮೇಲಿರುವ ರಾಜೇಂದ್ರ ವಿಲಾಸ ಕಳೆದ ಶತಮಾನದ ಪೂರ್ವಾರ್ಧ ಭಾಗದಲ್ಲಿ ನಿರ್ಮಾಣಗೊಂಡ ಆಕರ್ಷಕ ಅರಮನೆಯಾಗಿದ್ದು, ಉಲ್ಲೇಖಾರ್ಹವಾಗಿದೆ.

**ವರುಣ (೨,೧೬೨)** : ಮೈಸೂರಿನಿಂದ ಆಗ್ನೇಯಕ್ಕೆ ೧೦ ಕಿ.ಮೀ. ದೂರದಲ್ಲಿ ತಿರುಮಕೂಡಲು ನರಸೀಪುರ ರಸ್ತೆಯಲ್ಲಿರುವ ಇದು ಸುಮಾರು ೯–೧೦ನೆಯ ಶತಮಾನದಲ್ಲಿ ಚಾಲುಕ್ಯಾನ್ವಯಕ್ಕೆ ಸೇರಿದ್ದ ಸಾಮಂತ ಶಾಖೆಯೊಂದರ ನೆಲೆಯಾಗಿದ್ದು. ಇಲ್ಲಿನ ಶಾಸನಗಳಲ್ಲಿ ಆ ವಂಶದ ಗೊಗ್ಗಿ, ನರಸಿಂಹ ಮುಂತಾದವರ ಉಲ್ಲೇಖವಿದೆ. ಪ್ರಾಚೀನ ಶಾಸನಗಳಲ್ಲಿ 'ಹೊಣರ' ಎಂದು ಉಲ್ಲೇಖಿಸಲ್ಪಟ್ಟಿರುವ ಈ ಗ್ರಾಮದಲ್ಲಿ ಅದೇ ಅವಧಿಯ ಕೆಲವು ಪ್ರಾಚೀನ ಅವಶೇಷಗಳಿವೆ. ಅವುಗಳಲ್ಲಿ ಮಹಾಲಿಂಗೇಶ್ವರ ಅಥವಾ ಭೂತೇಶ್ವರ ದೇವಾಲಯ ಮುಖ್ಯವಾದುದು. ಇದು ಗರ್ಭಗುಡಿ ಹಾಗೂ ಸುಕನಾಸಿಗಳನ್ನು ಮಾತ್ರ ಒಳಗೊಂಡಿದ್ದು ದೇವಾಲಯದ ಹೊರಭಿತ್ತಿಯ ಅಲಂಕಾರ ಒಳಗಿನ ವಿನ್ಯಾಸಗಳೆಲ್ಲವೂ ಗಂಗಶೈಲಿಯಲ್ಲಿದೆ. ದೇವಾಲಯದ ಹೊರಗೋಡೆಯ ಕಪೋತದ ಕೆಳಗೆ ಪೌರಾಣಿಕ ಕಥೆಗಳನ್ನೊಳಗೊಂಡ ಶಿಲ್ಪ ಪಟ್ಟಿಕೆಗಳಿದ್ದು, ರಾಮಾಯಣ ಪಟ್ಟಿಕೆಗಳು ವಿಶಿಷ್ಟ ರೀತಿಯದಾಗಿವೆ. ವರುಣದಲ್ಲಿ ಸುಮಾರು ೧೧–೧೨ನೆಯ ಶತಮಾನಕ್ಕೆ ಸೇರಿದ ಕೆಲವು ಜೈನ ಅವಶೇಷಗಳೂ ದೊರಕಿವೆ. ಇಲ್ಲಿರುವ ಮಹದೇಶ್ವರ ದೇವಾಲಯ ಸ್ವಲ್ಪ ದೊಡ್ಡ ಕಟ್ಟಡವಾಗಿದ್ದು, ಅದನ್ನು ೧೮೨೮ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಧರ್ಮಪತ್ನಿ ಲಕ್ಷ್ಮೀವಿಲಾಸದ ದೇವಮ್ಮಣ್ಣಿ ಕಟ್ಟಿಸಿದರು. ನವರಂಗದಲ್ಲಿ ಪಾರ್ವತಿ, ನಂದಿ, ವಿದ್ಯಾಗಣಪತಿ ಮತ್ತು ಕೃಷ್ಣನ ಮೂರ್ತಿಗಳಿವೆ. ಗರ್ಭಗುಡಿಯಲ್ಲಿ ಗೋಳಾಕಾರದ ಶಿಲಾಲಿಂಗವಿದೆ. ಕಂಚಿನ ಸದಾಶಿವ ಶಿಲ್ಪವೂ ಇಲ್ಲಿದೆ. ವರುಣದ ಬಳಿ ದೊಡ್ಡ ಕೆರೆ ಇದೆ. ಊರ ಉತ್ತರ ಭಾಗದಲ್ಲಿರುವ ಮಹಾದೇವಮ್ಮನ ಗುಡಿಯ ಗರ್ಭಗುಡಿಯು ವಿಶಿಷ್ಟವಾಗಿದ್ದು, ಶಿಲ್ಪದ ಪೀಠದ ಮೇಲೆ ಶಾಸನವಿದೆ. ಈ ದೇವಾಲಯವನ್ನು ಜನವರಿ–ಫೆಬ್ರವರಿ ತಿಂಗಳಲ್ಲಿ, ಶಿವರಾತ್ರಿ ಹಾಗೂ ಮಂಗಳವಾರಗಳಂದು ಮಾತ್ರ ತೆರೆದು ದೇವಿಯನ್ನು ಪೂಜಿಸಲಾಗುತ್ತದೆ. ಊರ ಪಶ್ಚಿಮದ ಬಸ್ತಿತಿಟ್ಟು ಪರಿಸರವು ಹಿಂದೆ

ಜೈನ ಬಸದಿಯನ್ನು ಹೊಂದಿದ್ದ ಸ್ಥಳವಾಗಿದ್ದು, ಅದರ ಅವಶೇಷಗಳನ್ನು ನಂತರದಲ್ಲಿ ವರಕೋಡಿನ ವರದರಾಜ ದೇವಾಲಯ ಮರುನಿರ್ಮಾಣದಲ್ಲಿ ಬಳಸಿಕೊಳ್ಳಲಾಯಿತೆಂದು ಹೇಳಲಾಗುತ್ತದೆ.

**ವರಕೋಡು (೪,೩೮೪):** ತಾಲೂಕು ಕೇಂದ್ರ ಮೈಸೂರಿನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿರುವ ಇದು, ಇಮ್ಮಡಿಬಲ್ಲಾಳನ ಕುಬಾರಬೀಡು ಶಾಸನದಲ್ಲಿ 'ಒರೆಕೋಡು' ಎಂದು ಉಲ್ಲೇಖಿತಗೊಂಡಿದ್ದು, ಮೈಸುನಾಡು-೭೦ರ ವ್ಯಾಪ್ತಿಯಲ್ಲಿದ್ದ ಪ್ರಮುಖ ಸ್ಥಳ. ನೆರೆಯ ವರುಣಗ್ರಾಮದಿಂದ ತಂದದ್ದೆಂದು ಹೇಳಲಾಗುವ ಮೂರು ಜೈನಶಾಸನಗಳು ಗ್ರಾಮದ ಹೊರಭಾಗದಲ್ಲಿರುವ, ಸೋಪಾನದಿಂದ ಕೂಡಿದ ಆಕರ್ಷಕ ಕಲ್ಯಾಣಿಯ ಹಾಸುಗಲ್ಲಾಗಿವೆ. ಅವುಗಳಲ್ಲೊಂದು, ಪಿಟ್ಟಬ್ಬೆಯ ನಿಸಿದಿ ಶಾಸನವಾದರೆ, ಮತ್ತೊಂದು ಹೊಯ್ಸಳ ದಂಡನಾಯಕ ಪುಣಿಸಮಯ್ಯನು, ಬಸದಿಗೆ ದತ್ತಿಬಿಟ್ಟ ಅಂಶವನ್ನು ದಾಖಲಿಸುತ್ತದೆ. ಆದರೆ ಇಲ್ಲಿಂದು ಯಾವುದೇ ಜೈನಾವಶೇಷಗಳಿಲ್ಲ. ಇಲ್ಲಿರುವ ವರದರಾಜ ದೇವಾಲಯವು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಮೂಲತಃ ಜನಾರ್ದನನಿಗಾಗಿ ನಿರ್ಮಿಸಿದ್ದ ಅಂಶ ಅಲ್ಲಿರುವ ಶಾಸನವೊಂದರಿಂದ ವೇದ್ಯವಾಗುತ್ತದೆ. ಈ ದೇವಾಲಯವನ್ನು ಗಂಗ-ಚೋಳ ದೇವಾಲಯಗಳ ಅವಶೇಷಗಳನ್ನು ಬಳಸಿ ಪುನರ್ ನಿರ್ಮಿಸಿರುವಂತೆ ತೋರುತ್ತದೆ. ಪ್ರಾಕಾರದ ಒಳಭಾಗದಲ್ಲಿ ಕೈಸಾಲೆ ಮಂಟಪವಿದ್ದು, ಗರ್ಭಗೃಹದಲ್ಲಿ ಸುಮಾರು ಒಂದು ಮೀಟರ್ ಎತ್ತರದ ಜನಾರ್ದನ ಶಿಲ್ಪವಿದ್ದು, ಇಕ್ಕೆಲದ ಕೋಷ್ಟಗಳಲ್ಲಿ ಲಕ್ಷ್ಮೀದೇವಿಯರ ಶಿಲ್ಪಗಳಿವೆ. ನವರಂಗದ ಕಂಬಗಳು ವಿಜಯನಗರ ಶೈಲಿಯದಾಗಿದ್ದು, ನರಸಿಂಹ, ನಾಟ್ಯಗಣಪ, ಹನುಮ, ಕೃಷ್ಣ ಮುಂತಾದ ಉಬ್ಬುಶಿಲ್ಪಗಳನ್ನು ಹೊಂದಿವೆ. ದೇವಾಲಯದ ಮುಖಮಂಟಪವು ಹೊಯ್ಸಳ ಕಂಬಗಳನ್ನು ಹೊಂದಿದ್ದರೂ, ಅವುಗಳ ಮೇಲೆ ಸುಮಾರು ೧೭ನೇ ಶತಮಾನಕ್ಕೆ ಸೇರಿದ ಎರಡು ಜೈನಶಾಸನಗಳಿವೆ. ಗುಡಿಯ ಹಿಂಬದಿಯಲ್ಲಿ ಮೈಸೂರು ಶೈಲಿಯ ಲಕ್ಷ್ಮಿ ವಿಗ್ರಹವುಳ್ಳ ಕಿರುಗುಡಿಯಿದೆ. ಊರಾಚೆ ಇರುವ ಕಲ್ಯಾಣಿ ಮೈಸೂರು ಅರಸರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದ್ದು, ಆಕರ್ಷಕವಾಗಿದೆ. ಊರಲ್ಲಿ ಬಸವೇಶ್ವರ, ಬೀರದೇವರು, ಹಾಗೂ ದೇವಿಗುಡಿಗಳಿವೆ. ಊರಿಗೆ ಮೂರು ಕಿ.ಮೀ. ದೂರದಲ್ಲಿರುವ ಗುಡ್ಡದ ಮೇಲೆ ಬಸವೇಶ್ವರ ಗುಡಿ ಹಾಗೂ ಗವಿಗಳಿದ್ದು, ಆ ಮೂರು ಗುಡ್ಡಕ್ಕೂ ಊರಿಗೂ ಸಂಬಂಧವಿರುವುದಕ್ಕೆ ಸ್ಥಳೀಯ ಐತಿಹ್ಯವಿದೆ. ನೆರೆಯ ಬಳಗೆರೆ ಹುಂಡಿಯಲ್ಲಿ ವರ್ಷಕ್ಕೊಮ್ಮೆ ಜರುಗುವ ಬಸವನಪರಿಷೆಯು ವಿಶಿಷ್ಟ ಆಚರಣೆಯಿಂದಾಗಿ ಉಲ್ಲೇಖಾರ್ಹವಾಗಿದೆ.

**ವಾಜಮಂಗಲ (೪೨೯):** ತಾಲೂಕು ಕೇಂದ್ರ ಮೈಸೂರಿನಿಂದ ೧೦ ಕಿ.ಮೀ. ಉತ್ತರಕ್ಕಿರುವ ಇದು ಪ್ರಾಚೀನ ಶಾಸನಗಳಲ್ಲಿ 'ಓಜಮಂಗಲ' ಎಂದು ಉಲ್ಲೇಖಿತಗೊಂಡಿದೆ. ಇಲ್ಲಿಯ ಸೋಮೇಶ್ವರ ದೇವಾಲಯವು ತ್ರಿಕೂಟವಾಗಿದ್ದು, ಇಟ್ಟಿಗೆಯ ರಚನೆಯಿಂದ ಕೂಡಿದ್ದು ಗಂಗ ಕಾಲದ ಕಂಬಗಳನ್ನು ಹೊಂದಿದೆ. ಗುಡಿಯ ಮುಂದಿರುವ ಕಲ್ಯಾಣಿಯನ್ನು ಬೀರಗೌಡ, ಮಾದಿಗೌಡ ಹಾಗೂ ಅಂಕಗೌಡ ಸೋದರರು ೧೨೭೭ರಲ್ಲಿ ನಿರ್ಮಿಸಿ

ದತ್ತಿ ನೀಡಿದ ಅಂಶವನ್ನು ಅದರ ಮೇಲಿನ ಶಾಸನ ತಿಳಿಸುತ್ತದೆ. ಈ ಗುಡಿಯ ಪ್ರಧಾನ ಗರ್ಭಗೃಹದಲ್ಲಿಂದು ವಿಷ್ಣುಮೂರ್ತಿ ಇದ್ದರೆ, ಉಳಿದೆರಡರಲ್ಲಿ ಶಿವಲಿಂಗಗಳಿವೆ. ಗರ್ಭಗೃಹದ ದ್ವಾರಪಾಲಕರು ಗಂಗ ಶಿಲ್ಪಲಕ್ಷಣವನ್ನು ಹೊಂದಿದ್ದು ಆಕರ್ಷಕವಾಗಿವೆ. ಅಲ್ಲದೇ, ಸಪ್ತಮಾತೃಕಾ, ಉಮಾಮಹೇಶ್ವರ ಹಾಗೂ ಸೂರ್ಯ ಶಿಲ್ಪಗಳಿಲ್ಲಿವೆ. ಬಳಿಯಲ್ಲೇ ಸಂಪೂರ್ಣ ನವೀಕರಣಗೊಂಡಿರುವ ಅಂಕನಾಥೇಶ್ವರ ಗುಡಿ ಇದೆ. ಈ ಗುಡಿ ಪರಿಸರದಲ್ಲಿ ವೀರಗಲ್ಲುಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಊರಲ್ಲಿ ಎರಡು ಕೆರೆಗಳಿವೆ. ಊರ ಪ್ರದೇಶದಲ್ಲಿರುವ ಸದಾಶಿವರಾಯನ ಕಾಲದ ಶಾಸನದಿಂದ ಈ ಗ್ರಾಮವನ್ನು ಸೆಟ್ಟಿಉಂಬಳಿಯಾಗಿ ದಾನ ಬಿಟ್ಟ ಅಂಶದೊಂದಿಗೆ ಹಿಂದೆ ಶ್ರೀರಂಗಪಟ್ಟಣ ಸೀಮೆಗೆ ಇದು ಸೇರಿದ್ದ ವಿಷಯವೂ ವೇದ್ಯವಾಗುತ್ತದೆ.